# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಮಾರ್ಚ್ 2014
ಬೆಲೆ ರೂ. 1



ವಿಶ್ವ ಪರಿಧಿಯದೆಲ್ಲೊ
ಸೂರ್ಯಚಂದ್ರರಿನಾಚೆ
ವಿಶ್ವಕೇಂದ್ರವು ನೀನೆ,
ನೀನೆಣಿಸಿದೆಡೆಯೆ
ನಿಶ್ವಸಿತ ಸಂಬಂಧ
ನಿನಗಂ ದಿಗಂತಕಂ
ಪುಷ್ಟವಾಗಿರು ನೀನು -
ಮಂಕುತಿಮ್ಮ

# ಮಾಸ್ತಿ, ಡಿವಿಜಿ ಸ್ಮರಣೆ



ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 24 ಸಂಚಿಕೆ 6
ಮಾರ್ಚ್ 2014, ಬೆಲೆ ರೂ. 1

**ಅಭಿಮತ ಸಂಪಾದಕ ಮಂಡಳಿ**
ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜು: 9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್ 9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತಾ: 9971121636
ಟಿ.ಎಂ. ಮೈಲಾರಪ್ಪ: 9868347461

**ಸಮಿತಿ ಸದಸ್ಯರು**
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂರ್ಣಿಮಾ ಗೌಡ: 8860916899
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ

## ನೇರ ಮಾತು

ನಾವು ಈ ಹಣಕಾಸು ವರ್ಷದ ಕೊನೆಯ ತಿಂಗಳಲ್ಲಿದ್ದೇವೆ. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಹೊಸ ಕಾರ್ಯಕಾರಿ ಸಮಿತಿಯು ರಚನೆಯಾದ ನಂತರದ ಕೆಲವು ಮಹತ್ತರ ಘಟ್ಟಗಳನ್ನು ನೆನಪು ಮಾಡಿಕೊಳ್ಳುತ್ತಿದ್ದೇವೆ. ಹೊರನಾಡ ಕನ್ನಡಿಗರ ಆಸಕ್ತಿಗಳು ಅತ್ಯಂತ ವೈವಿಧ್ಯಮಯ. ಹಾಗಾಗಿ ಹೊರನಾಡಿನಲ್ಲಿರುವ ಕನ್ನಡ ಸಂಘ ಸಂಸ್ಥೆಗಳು ಕಾರ್ಯಕ್ರಮಗಳನ್ನು ಆಯೋಜಿಸುವಾಗ ಅವರ ಆಶೋತ್ತರಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. ದೆಹಲಿ ಮತ್ತು ಅದರ ಪರಿಸರದಲ್ಲಿ ವಾಸಿಸುತ್ತಿರುವ ಎಲ್ಲ ವರ್ಗದ ಕನ್ನಡಿಗರನ್ನು ತಲುಪಲು ಯೋಜನೆಗಳನ್ನು ಹಾಕಿಕೊಳ್ಳುವುದರ ಮೂಲಕ ದೆಹಲಿ ಕರ್ನಾಟಕ ಸಂಘವನ್ನು ಸರ್ವಾಂಗೀಣವಾಗಿ ಬೆಳೆಸಲು ಪ್ರಯತ್ನಗಳು ನಡೆದಿವೆ. ಜತೆಗೆ ಸಂಘದ ಭೌತಿಕ ಬೆಳವಣಿಗೆಯ ಕಡೆಗೂ ಗಮನ ಹರಿಸಲಾಗಿದೆ. ಈ ಪ್ರಯತ್ನಗಳನ್ನು ಗಮನಿಸಿದ ಉತ್ತರ ಕನ್ನಡದ ಇಡಗುಂಜಿ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿಯು ದೆಹಲಿ ಕರ್ನಾಟಕ ಸಂಘಕ್ಕೆ 'ಕೆರೆಮನೆ ಶಂಭು ಹೆಗಡೆ ಸಂಮಾನ–2014' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈ ಪ್ರಶಸ್ತಿಯು ನಮ್ಮೆಲ್ಲರ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ. ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಮ್ಮ ಎಲ್ಲಾ ಕೆಲಸಗಳಿಗೆ ಬೆಂಬಲ ನೀಡಿದೆ. ದೆಹಲಿಯ ಮಾಧ್ಯಮ ಮಿತ್ರರು ಸಲಹೆ ಸೂಚನೆಗಳನ್ನು ನೀಡುತ್ತಿದ್ದಾರೆ.

ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣಕ್ಕಾಗಿ ಮಾಡಿದ ಸಾಲ ಈ ಅವಧಿಯಲ್ಲಿ ಮುಗಿದು ನಾವೆಲ್ಲ ನಿರಾಳವಾಗಿ ಉಸಿರು ಬಿಡುವಂತಾಗಿದೆ ಮತ್ತು ಇದು ಸಂಘವನ್ನು ಹೊಸ ಬಗೆಯಲ್ಲಿ ಮುನ್ನಡೆಸಲು ಮತ್ತಷ್ಟು ಜವಾಬ್ದಾರಿಯನ್ನು ನಮ್ಮ ಮೇಲೆ ಹೊರಿಸಿದೆ. ಇದನ್ನು ಗಮನದಲ್ಲಿರಿಕೊಂಡು ಆರಂಭಿಕ ಹಂತದ ಪ್ರಯತ್ನವಾಗಿ 'ಕಟ್ಟಡ ನಿಧಿ ಉಳಿತಾಯ ಯೋಜನೆ' ನಿಧಿಯನ್ನು ಸ್ಥಾಪಿಸಲಾಗಿದೆ. ಈ ನಿಧಿಯಲ್ಲಿ ಈಗಾಗಲೇ ರೂ. 30 ಲಕ್ಷವನ್ನು ಜಮಾ ಮಾಡಲಾಗಿದೆ. ಇದನ್ನು ದೊಡ್ಡ ಮೊತ್ತದ ನಿಧಿಯನ್ನಾಗಿ ಪರಿವರ್ತಿಸಲು ನಮ್ಮ ಪ್ರಯತ್ನ ಸಾಗಿದೆ. ಸಂಘದ ಆರ್ಥಿಕ ಸುಭದ್ರತೆ ಮತ್ತು ಸಮರ್ಥ ಹಣಕಾಸಿನ ನಿರ್ವಹಣೆಯ ಬಗೆಗೆ ವಿಶೇಷ ಆದ್ಯತೆ ನೀಡಲಾಗಿದೆ.

ಸಂಘಕ್ಕೆ ಅತ್ಯಂತ ಅವಶ್ಯವಾಗಿದ್ದ ಕಲಾಶಾಲೆ (ಆರ್ಟ್ ಗ್ಯಾಲರಿಯನ್ನು) ಸ್ಥಾಪಿಸಲಾಗಿದೆ. ನಾಡಿನ ಗಣ್ಯ ಕಲಾವಿದರು ಈಗಾಗಲೇ ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಸಂಘದ ವಿಚಾರ ಸಂಕಿರಣ ಭವನವನ್ನು ಆಧುನಿಕ ತಂತ್ರಜ್ಞಾನವನ್ನು ಬಳಸಲು ಅನುಕೂಲಕರವಾಗುವಂತೆ ನವೀಕರಿಸಲಾಗಿದೆ. ಕರ್ನಾಟಕ ಸರಕಾರ ನೀಡಿರುವ ಒಂದು ಕೋಟಿ ಅನುದಾನದಲ್ಲಿ ಬಾಕಿ ಉಳಿದಿರುವ ಕೆಲಸಗಳನ್ನು ಸಂಪೂರ್ಣಗೊಳಿಸಲಾಗಿದೆ. ದೆಹಲಿಯ ಕನ್ನಡ ಪರ ಸಂಘ ಸಂಸ್ಥೆಗಳು ಹಾಗೂ ನಾಡಿನ ಇತರ ಕನ್ನಡ ಸಂಘ ಸಂಸ್ಥೆಗಳು ಸಂಘದ ಸಭಾಂಗಣ, ವಿಚಾರ ಸಂಕಿರಣ ಭವನ ಮತ್ತು ಆರ್ಟ್ ಗ್ಯಾಲರಿಯನ್ನು ನಿಯತವಾಗಿ ಬಳಸಲು ಹೆಚ್ಚಿನ ಒತ್ತು ನೀಡಲಾಗಿದೆ. ಸಂಘದ ಅತಿಥಿ ಗೃಹವನ್ನು ಕನ್ನಡಿಗರಿಗೆ ಸೀಮಿತವಾಗಿರಿಸಿ, ಹೆಚ್ಚು ಹೆಚ್ಚು ಕನ್ನಡಿಗರು ಸಂಘದ ಕಡೆ ಬರುವಂತೆ ಮಾಡಲಾಗಿದೆ.

ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಸರಕಾರದ ಸಹಯೋಗದೊಂದಿಗೆ ಕನ್ನಡ ಅಧ್ಯಯನ ಪೀಠ ಸ್ಥಾಪನೆಯ ಕುರಿತಂತೆ ಈಗಾಗಲೇ ಕಾರ್ಯಪ್ರವೃತ್ತವಾಗಿದ್ದು ಕರ್ನಾಟಕ ಸರಕಾರದ ಮುಖ್ಯ ಮಂತ್ರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಕೇಂದ್ರ ಸಚಿವರುಗಳಿಗೂ ಕೂಡಾ ಇದರ ಕುರಿತು ವಿಶೇಷ ಪ್ರಯತ್ನವನ್ನು ಮಾಡುವಂತೆ ಒತ್ತಡ ಹೇರಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕರ್ನಾಟಕ ಸರಕಾರದ ಕ್ರಿಯಾ ಯೋಜನೆಯಡಿಯಲ್ಲಿ 2013–14ರ ಸಾಲಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗಾಗಿ ರೂ.20 ಲಕ್ಷ ಅನುದಾನವನ್ನು ಪಡೆಯುವಲ್ಲಿ ಸಫಲವಾಗಿರುವ ಸಂಘವು ಅದನ್ನು ಸಮರ್ಥವಾಗಿ ಬಳಸಿಕೊಂಡು ಕಾರ್ಯಕ್ರಮಗಳನ್ನು ನಡೆಸುವಲ್ಲಿ ಯಶಸ್ವಿಯಾಗಿದೆ. ಸಂಘದ ಸದಸ್ಯರ ನಡುವಣ ಸಂಪರ್ಕ ಸೇತುವೆ ಮಾತ್ರವಲ್ಲ, ದೆಹಲಿ ಕನ್ನಡಿಗರ ಸೃಜನಶೀಲತೆಗೆ ವೇದಿಕೆಯಾಗಿರುವ ಅಭಿಮತವು ಇದೀಗ ಹೊಸ ವಿನ್ಯಾಸದೊಂದಿಗೆ ಪ್ರಕಟವಾಗುತ್ತಿದೆ ಮಾತ್ರವಲ್ಲ ನಾಡಿನಾದ್ಯಂತ ಜನಮನ್ನಣೆ ಪಡೆಯುತ್ತಿದೆ.

ಕೆಲವು ವರ್ಷಗಳಿಂದ ಅನಿವಾರ್ಯ ಕಾರಣಗಳಿಂದ ನೀಡಲಾಗದಿದ್ದ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ಕಳೆದ ನವಂಬರ್‌ನಲ್ಲಿ ಯಕ್ಷಗಾನ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗಾಗಿ ಗುರು ಬನ್ನಂಜೆ ಸಂಜೀವ ಸುವರ್ಣ ಅವರಿಗೂ (2010) ಪರಿಸರಕ್ಕೆ ನೀಡಿದ ಕೊಡುಗೆಗಾಗಿ ಸಾಲು ಮರದ ತಿಮ್ಮಕ್ಕ ಅವರಿಗೂ (2012) ನೀಡಲಾಗಿದೆ. ಶಾರದಾ ಪ್ರಸಾದ್ ಅವರು ಕನ್ನಡದಿಂದ ಇಂಗ್ಲೀಷ್‌ಗೆ ಅನುವಾದಿಸಿದ, ಶ್ರೀ ಸಿದ್ದವ್ವನ ಹಳ್ಳಿ ಕೃಷ್ಣ ಶರ್ಮರ ಪ್ರಸಿದ್ಧ ಕೃತಿ 'ವಾರ್ಧಾಯಾತ್ರೆ' ಯು ಇದೀಗ ಬಿಡುಗಡೆಯ ಹಂತದಲ್ಲಿದೆ.

ಗ್ರಂಥಾಲಯಕ್ಕೆ ಗ್ರಂಥಪಾಲಕರನ್ನು ನೇಮಿಸಲಾಗಿದೆ. ಜೊತೆಗೆ ಪುಸ್ತಕಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಂಗಡಿಸಿ, ವ್ಯವಸ್ಥಿತಗೊಳಿಸುವ ಕೆಲಸ ಆರಂಭವಾಗಿದೆ. ಕರ್ನಾಟಕ ರಾಜ್ಯೋತ್ಸವವನ್ನು ನವೆಂಬರ್ ತಿಂಗಳಿಡೀ ಆಚರಿಸುವ ಮೂಲಕ ಅದನ್ನು ಅರ್ಥಪೂರ್ಣವಾಗಿ ಆಚರಿಸಲಾಗಿದೆ.

ಸಂಘವನ್ನು ದೆಹಲಿಯ ಕ್ರಿಯಾಶೀಲ ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಲು ಪ್ರಯತ್ನಗಳು ನಡೆಯುತ್ತಿವೆ. ಸಂಘದ ಸದಸ್ಯರಿಗೆ ಮತ್ತು ಇತರರಿಗೆ ಹಿಂದೂಸ್ತಾನಿ ಸಂಗೀತ ತರಬೇತಿಯನ್ನು ನೀಡಲಾಗುತ್ತಿದೆ. ಜತೆಗೆ ತಬಲ ತರಗತಿಗಳನ್ನು ನಡೆಸಲಾಗುತ್ತಿದೆ. ಹೊಸ ಕಾರ್ಯಕ್ರಮಗಳೊಂದಿಗೆ ಸಂಘದಲ್ಲಿ ನಿಯತವಾಗಿ ನಡೆದುಕೊಂಡು ಬಂದಿರುವ ಕೆಲವು ಕಾರ್ಯಕ್ರಮಗಳನ್ನು ಹೆಚ್ಚಿನ ಮುತುವರ್ಜಿವಹಿಸಿ ಮುಂದುವರೆಸಿಕೊಂಡು ಬರಲಾಗಿದೆ. ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ಮುಂದುವರಿಸಲಾಗಿದೆ ಮತ್ತು ಅದನ್ನು ಕ್ಯಾನ್ಸರ್‌ಗೆ ಸಂಬಂಧಿಸಿದ ರೋಗಗಳಿಗೆ ವಿಸ್ತರಿಸಲಾಗಿದೆ. ಈ ತಿಂಗಳಿನಿಂದ ವಿಶೇಷವಾಗಿ ಮಹಿಳೆಯರಿಗಾಗಿ ಆಯುರ್ವೇದ ವೈದ್ಯಕೀಯ ಸಲಹೆಯನ್ನು ನುರಿತ ವೈದ್ಯರಿಂದ ಉಚಿತವಾಗಿ ನೀಡಲು ಆರಂಭಿಸಲಾಗಿದೆ.

ಸಂಘದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ, ರಂಗಭೂಮಿ, ಸಿನಿಮಾ, ಸಂಗೀತ, ಚಿತ್ರಕಲೆ ಮುಂತಾದ ವಿವಿಧ ಆಯಾಮಗಳ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಅವುಗಳ ಪಟ್ಟಿಯೊಂದನ್ನು ಮುಂದಿನ ಪುಟದಲ್ಲಿ ಕಾಣಬಹುದು.

ಕಾಲ ಶಿಶಿರದಿಂದ ವಸಂತದತ್ತ ಹೆಜ್ಜೆಯಿಕ್ಕುತ್ತಿದೆ. ದೆಹಲಿಯು ಕೂಡಾ ಚುಮುಚುಮು ಚಳಿಗೆ ಹೊದ್ದುಕೊಂಡ ಕಂಬಳಿಯನ್ನು ಸರಿಸಿ ಮತ್ತೊಂದು ಬೇಸಿಗೆಯನ್ನು ಎದುರು ನೋಡುತ್ತಿದೆ. ಸದಸ್ಯರಿಗೆಲ್ಲರಿಗೂ ಬಣ್ಣದ ಹಬ್ಬ ಹೋಳಿ ಮತ್ತು ಹೊಸ ಸಂವತ್ಸರ 'ಜಯ'ವನ್ನು ಸ್ವಾಗತಿಸುವ ಯುಗಾದಿ ಹಬ್ಬದ ಶುಭಾಶಯಗಳು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

**DELHI KARNATAKA SANGHA**
Rao Tularam Marg, Sector-12, R K Puram, New Delhi-110022.
Phone: 011-26109615. 011-65643615 email:dksangha@gmail.com website : www.delhikarnatakasangha.com

# ದೆಹಲಿ ಕರ್ನಾಟಕ ಸಂಘದಲ್ಲಿ ವಿವಿಧ ಆಯಾಮಗಳ ಕಾರ್ಯಕ್ರಮ



**ಸಾಹಿತ್ಯಿಕ ಕಾರ್ಯಕ್ರಮಗಳು :**

2013 ಆಗಸ್ಟ್ 11: ಬೆಂಗಳೂರಿನಲ್ಲಿ ನಿಘಂಟು ತಜ್ಞ ಶತಾಯುಷಿ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರಿಗೆ ಅಭಿನಂದನೆ.
2013 ಸ. 22: ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ಸ್ವರಚಿತ ಕವನಗಳ ವಾಚನ.
2013 ಅಕ್ಟೋಬರ್ 27: ಭಾಷಾ ರಂಗೋಲಿ ಕಾರ್ಯಕ್ರಮದಲ್ಲಿ ಪ್ರೊ. ವಿವೇಕ ರೈ, ಪ್ರೊ. ಚಿನ್ನಪ್ಪ ಗೌಡ, ಶ್ರೀ ಬಿ.ಎಂ. ಹನೀಫ್, ಡಾ. ರೇಖಾ ವಸಂತ್ ಹಾಗೂ ಡಾ. ಜಯಂತ್ ನಾಯ್ಕ್
2013 ನವೆಂಬರ್ 17: ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ ಅಂಗವಾಗಿ ಕಾರಂತ ನೆನಪು.
2014 ಜನವರಿ 25: ರಾಷ್ಟ್ರಕವಿ ನಾಡೋಜ ಡಾ. ಜಿಎಸ್. ಶಿವರುದ್ರಪ್ಪ ನೆನಪು ಕಾರ್ಯಕ್ರಮ, ಡಾ. ಟಿ.ಎಸ್. ಸತ್ಯನಾಥ್ ಅವರಿಂದ ನೆನಪು ಹಾಗೂ ಸಂಘದ ಕಲಾವಿದರಿಂದ ಕವಿತೆಗಳ ಗಾಯನ.
2014 ಫೆಬ್ರವರಿ 1: ಕೋಲಾರದ ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಪ್ರತಿಷ್ಠಾನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಮಾಸ್ತಿ ಸಂಸ್ಮರಣೆ ಕಾರ್ಯಕ್ರಮ. ಮಾಸ್ತಿಯವರ ನಾಟಕಗಳು, ಕಾವ್ಯ ಹಾಗೂ ಸಣ್ಣ ಕತೆಗಳ ಕುರಿತು ಉಪನ್ಯಾಸಗಳು
2014 ಫೆಬ್ರವರಿ 2: ಕೋಲಾರದ ಪದ್ಮಭೂಷಣ ಡಿ.ವಿ. ಗುಂಡಪ್ಪ ಪ್ರತಿಷ್ಠಾನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಡಿ.ವಿ.ಜಿ. ನಮನ ಕಾರ್ಯಕ್ರಮ. ಡಿ.ವಿ.ಜಿಯವರ ಮಂಕುತಿಮ್ಮನ ಕಗ್ಗ ಕುರಿತು ವಿಶೇಷ ಉಪನ್ಯಾಸ.
2014 ಫೆಬ್ರವರಿ 16: ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರಿಂದ ಅಕ್ಕ ಮಹಾದೇವಿ ಕುರಿತು ವಿಶೇಷ ಉಪನ್ಯಾಸ

**ನಾಟಕ ಪ್ರದರ್ಶನಗಳು :**

2013 ಆಗಸ್ಟ್ 15: ಸಹ್ಯಾದ್ರಿ ರಂಗತರಂಗ ಶಿವಮೊಗ್ಗ ಇವರಿಂದ 'ರಾವಿ ನದಿಯ ದಂಡೆಯಲ್ಲಿ' ನಾಟಕ ಪ್ರದರ್ಶನ
2013 ನವೆಂಬರ್ 15: ಮೈಸೂರು ರಂಗಾಯಣದ ಕಲಾವಿದರಿಂದ ರಂಗಗೀತೆಗಳು ಮತ್ತು ಬೀಚಿ ಸಾಹಿತ್ಯ ಆಧಾರಿತ 'ಬೀಚಿ-ಬುಲ್ಲೆಟ್ಸ್' ನಗೆ ನಾಟಕ.
ನವೆಂಬರ್ 20 ಮತ್ತು 21ರಂದು ಶಿವ ದೇಶ ಸಂಚಾರ ರಂಗಯಾತ್ರೆಯ ಭಾಗವಾಗಿ ಶ್ರೀ ಶಿವಕುಮಾರ ಕಲಾಸಂಘ (ರಿ) ಸಾಣೇಹಳ್ಳಿ ಕಲಾವಿದರಿಂದ 'ಮರಣ ಹೀ ಮಹಾನವಮಿ' ಮತ್ತು 'ಮೈ ಬಾವರಿ ಚೆನ್ನ ಕೀ' ಹಿಂದಿ ನಾಟಕಗಳು
2013 ಡಿಸೆಂಬರ್ 1: ಪ್ರಸಂಗ ಥಿಯೇಟರ್ ಗ್ರೂಪ್, ಬೆಂಗಳೂರು ಕಲಾವಿದರಿಂದ 'ಅನಭಿಜ್ಞಾ ಶಾಕುಂತಲ' ನಾಟಕ ಪ್ರದರ್ಶನ.
2014 ಜನವರಿ 5: ಭಾಷ್ ಲಲಿತ ಕಲಾ ಸಂಘ, ನಾಗನಾಥಪುರ, ಬೆಂಗಳೂರು ಇವರಿಂದ 'ಮಂಗ ಮಾಣಿಕ್ಯ ಪ್ರಹಸನ' ನಾಟಕ.

**ಸಾಂಸ್ಕೃತಿಕ ಕಾರ್ಯಕ್ರಮಗಳು:**

2013 ಸೆಪ್ಟೆಂಬರ್ 9: ಭೀಮಸೇನ್ ಭಜಂತ್ರಿಯವರ ಸಂಗೀತ ಹಾಗೂ ಶಾರದಾ ವೆಂಕಟ್ ಅವರಿಂದ ಭರತನಾಟ್ಯ.
2013 ಸೆಪ್ಟೆಂಬರ್ 15: ಸಂಘದ ಕಲಾವಿದರಿಂದ ಚಂಡೀಗಢ ಕನ್ನಡ ಸಂಘದಲ್ಲಿ ಸಂಗೀತ ಕಾರ್ಯಕ್ರಮ.
2013 ಸೆಪ್ಟೆಂಬರ್ 9: ಪಂಡಿತ ಬಿ.ಎಸ್. ಮಠ ಮತ್ತು ವಿದೂಷಿ ಅಕ್ಕಮಹಾದೇವಿ ಮಠ ಅವರಿಂದ ವಯೋಲಿನ್ ವಾದನ.
2013 ಅಕ್ಟೋಬರ್ 27: ಮಳವಳ್ಳಿ ಮಹದೇವ ಸ್ವಾಮಿ ಹಾಗೂ ಸಂಗಡಿಗರಿಂದ ಜಾನಪದ ಹಾಡುಗಳ ಕಾರ್ಯಕ್ರಮ.
2013 ನವೆಂಬರ್ 10: ಡೊಳ್ಳು ಕುಣಿತ-ಶ್ರೀಮತಿ ಸುಗಂಧ ಮತ್ತು ತಂಡ, ಸಾಗರ, ಕಂಸಾಳೆ ಕರ್ನಾಟಕ ಜಾನಪದ ಕಂಸಾಳೆ ಕಲಾವಿದರ ಸಂಘ, ಬೆಂಗಳೂರು, ನಗಾರಿ-ಆದಿ ದ್ರಾವಿಡ ತಮಟೆ ಮತ್ತು ನಗಾರಿ ಸಾಂಸ್ಕೃತಿಕ ಕಲಾ ತಂಡ, ಮೈಸೂರು ಇವರಿಂದ.
2013 ನವೆಂಬರ್ 15: ಮೈಸೂರು ರಂಗಾಯಣದ ಕಲಾವಿದರಿಂದ ಮೈಮ್ ಸ್ಕಿಟ್, ತತ್ವಪದ, ಮತ್ತು ರಂಗಗೀತೆಗಳು
ನವೆಂಬರ್ 10 ರಿಂದ 17ರವರೆಗೆ ಸಂಘದ ಮುಂಭಾಗದಲ್ಲಿ ಡೊಳ್ಳು ಕುಣಿತ, ನಗಾರಿ ಮತ್ತು ಕಂಸಾಳೆ ಕಾರ್ಯಕ್ರಮಗಳ ಪ್ರದರ್ಶನ
2013 ನವೆಂಬರ್ 17: ಚಿತ್ತಾವನ ಮಹಿಳಾ ಯಕ್ಷಗಾನ ಮಂಡಳಿಯಿಂದ 'ನರಕಾಸುರ ಮೋಕ್ಷ' ಯಕ್ಷಗಾನ ಪ್ರದರ್ಶನ.
2013 ನವೆಂಬರ್ 24: ದೆಹಲಿಯ ಕನ್ನಡ ಕಲಾವಿದರಿಂದ ಸಾಂಸ್ಕೃತಿಕ ವೈವಿಧ್ಯ "ಕನ್ನಡ ಸಾಹಿತ್ಯ ಯಾತ್ರೆ" ಕಾರ್ಯಕ್ರಮ. ಇದರ ಪರಿಕಲ್ಪನೆ ಮತ್ತು ನಿರ್ದೇಶನ : ಸಿ.ಆರ್. ಪದ್ಮಶ್ರೀ.
2013 ನವೆಂಬರ್ 30: ಚಿಣ್ಣರ ಸಾಂಸ್ಕೃತಿಕ ವೈಭವ- ಸ್ಥಳೀಯ ಕನ್ನಡ ಮಕ್ಕಳ ಸಾಂಸ್ಕೃತಿಕ ಪ್ರತಿಭಾ ಪ್ರದರ್ಶನ ಮತ್ತು ರಂಗಮಂಟಪ ಕಲಾವಿದರಿಂದ ರಂಗಗೀತೆಗಳು ಕಾರ್ಯಕ್ರಮ.
2014 ಜನವರಿ 1: ಶ್ರೀ ವಿದ್ವಾನ್ ರಮೇಶ್, ಜಯ ನಾಟ್ಯ ಕಲಾ ಅಕಾಡೆಮಿ, ಕೋಲಾರ ಇವರಿಂದ ಡಾ.ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಆಯ್ದ ಕವನಗಳ ನೃತ್ಯ ರೂಪಕ.
2014 ಜನವರಿ 2: ಶ್ರೀ ವಿದ್ವಾನ್ ಕೋಲಾರ ರಮೇಶ್, ಮೂಡಲ ನಾಟ್ಯ ಕಲಾ ಅಕಾಡೆಮಿ, ಕೋಲಾರ ಇವರಿಂದ ಡಿವಿಜಿ ರಚನೆಗಳನ್ನು ಆಧರಿಸಿದ ನೃತ್ಯ ರೂಪಕ.
2014 ಫೆಬ್ರವರಿ 8: ಯುವ ಸಿಂಚನ-ಕರ್ನಾಟಕದ ಪ್ರಖ್ಯಾತ ಬಾಯ್ ಝೋನ್ ಡಾನ್ಸ್ ಅಕಾಡೆಮಿ, ಮಂಗಳೂರು ತಂಡದಿಂದ ಬಾಲಿವುಡ್ ಶೈಲಿಯ ನೃತ್ಯ ಹಾಗೂ ಸ್ಥಳೀಯ ಯುವ ಪ್ರತಿಭೆಗಳ ವೈವಿಧ್ಯಮಯ ಕಾರ್ಯಕ್ರಮ.
2014 ಫೆಬ್ರವರಿ 28: ವಿದ್ವಾನ್ ಶಂಕರ ಭಟ್ ಸ್ವರ್ಣವಳ್ಳಿ ಅವರಿಂದ 'ಭಕ್ತ ಪ್ರಹ್ಲಾದ' ಹರಿಕಥಾ ಕೀರ್ತನ.

**ಚಲನಚಿತ್ರಗಳ ಪ್ರದರ್ಶನ:**

(ಸಹಕಾರ: ಕರ್ನಾಟಕ ವಾರ್ತಾ ಇಲಾಖೆ, ನವದೆಹಲಿ)
2013 ಅಕ್ಟೋಬರ್ 2: 'ಗೋವಿಂದಾಯ ನಮಃ'
2013 ಅಕ್ಟೋಬರ್ 13: 'ವೀರ ಪರಂಪರೆ'
2013 ನವೆಂಬರ್ 10: 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ'
2014 ಫೆಬ್ರವರಿ 16: 'ಒರಿಯರ್ದೊರಿ ಅಸಲ್' (ತುಳು)
2014 ಫೆಬ್ರವರಿ 16: 'ಅಕ್ಕ ಹೆಜ್ಜೆ ಗುರುತುಗಳು' ಕಿರುಚಿತ್ರ

**ಕಲಾಕೃತಿಗಳ ಪ್ರದರ್ಶನ :**

2013 ಅಕ್ಟೋಬರ್ 19 ರಿಂದ 26: ವಿ.ಕೆ. ಕರೂ ಅವರ ಕಲಾಕೃತಿಗಳ ಪ್ರದರ್ಶನ
2013 ಅಕ್ಟೋಬರ್ 27 ರಿಂದ 2: ಚಿನ್ಮಯ್ ಅವರ ಕಲಾಕೃತಿಗಳ ಪ್ರದರ್ಶನ
2013 ನವೆಂಬರ್ 14 ರಿಂದ 30: ಆನಂದ್ ಮುರಗೋಡ ಅವರಿಂದ ಹಂಪಿ ಛಾಯಾಚಿತ್ರಗಳ ಪ್ರದರ್ಶನ
2014 ಜನವರಿ 12 ರಿಂದ 18: ಶಿವ ಹಾದಿಮನಿ ಅವರ ಚಿತ್ರಕಲಾ ಪ್ರದರ್ಶನ
2013 ಆಗಸ್ಟ್ 15: ಸ್ವಾತಂತ್ರ್ಯ ದಿನಾಚರಣೆ- ಧ್ವಜಾರೋಹಣ
2013 ಸೆಪ್ಟೆಂಬರ್ 5: ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಅಭಿನಂದನೆ
2013 ಸೆಪ್ಟೆಂಬರ್ 9: ಗಣೇಶ ಸಾಂಸ್ಕೃತಿಕ ಹಬ್ಬ -ಗಣೇಶಪೂಜೆ
2013 ಅಕ್ಟೋಬರ್ 12,13, 19 ಮತ್ತು 20 ರಂದು ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಗಳು
2013 ಆಗಸ್ಟ್ 15: 2012ರ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ.
2013 ಆಗಸ್ಟ್ 27 ರಂದು ನೂತನವಾಗಿ ಲೋಕಸಭೆಗೆ ಚುನಾಯಿತಗೊಂಡ ರಮ್ಯಾ ಹಾಗೂ ಡಿ.ಕೆ. ಸುರೇಶ್ ಅವರಿಗೆ ಅಭಿನಂದನೆ.
2013 ನವೆಂಬರ್ 1: ಕರ್ನಾಟಕ ರಾಜ್ಯೋತ್ಸವ ಧ್ವಜಾರೋಹಣ ಕಾರ್ಯಕ್ರಮ
2013 ನವೆಂಬರ್ 10: ಮಾಲಾ ಹೊನ್ನತ್ತಿ ಅವರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ.
2014 ಜನವರಿ 27: ರಾಷ್ಟ್ರಪತಿ ಶೌರ್ಯ ಪ್ರಶಸ್ತಿ ಪಡೆದ ಮಾಸ್ಟರ್ ಎಂ.ಎಸ್. ಮನೋಜ್ ಅವರಿಗೆ ಅಭಿನಂದನೆ.
2014 ಫೆಬ್ರವರಿ 16: ಶ್ರೀ ಎಸ್.ಕೆ. ಕುಲಕರ್ಣಿಯವರಿಗೆ 2013ನೇ ಸಾಲಿನ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಹಾಗೂ 2013-14ನೇ ಸಾಲಿನ ವಿದ್ಯಾರ್ಥಿ ವೇತನ ವಿತರಣೆ. ಅ

# ದೆಹಲಿ ಕರ್ನಾಟಕ ಸಂಘದಲ್ಲಿ ಅಕ್ಕ ಹೆಜ್ಜೆ ಗುರುತುಗಳು ಕಿರುಚಿತ್ರ ಪ್ರದರ್ಶನ



ಅಕ್ಕ– ಹೆಜ್ಜೆ ಗುರುತುಗಳು ಕಿರುಚಿತ್ರ ಪ್ರದರ್ಶನ ಮತ್ತು ಅಕ್ಕಮಹಾದೇವಿ ಕುರಿತು ಉಪನ್ಯಾಸವನ್ನು ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವ ವರ್ಷ ಆಚರಣೆಯ ಮೊದಲ ಕಾರ್ಯಕ್ರಮವಾಗಿ ಸಂಘದ ಸಭಾಂಗಣದಲ್ಲಿ ಫೆಬ್ರವರಿ 16ರಂದು ನಡೆಸಲಾಯಿತು.

ಸಮಾರಂಭದ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಕರ್ನಾಟಕ ಸರ್ಕಾರದ ಮಾಜಿ ಸಚಿವೆ ಮತ್ತು ಅಧ್ಯಕ್ಷೆ, ಅಕ್ಕಮಹಾದೇವಿ ಸಮಿತಿ, ಉಡುತಡಿಯ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಅಕ್ಕನ ಸಾಹಿತ್ಯ ಸಾಧನೆಗಳನ್ನು ಮುಂದಿನ ಜನಾಂಗಕ್ಕೆ ತಿಳಿಸುವ ಅವಶ್ಯಕತೆ ಇದೆ ಎಂದರು. ಅಕ್ಕಮಹಾದೇವಿ ಕನ್ನಡದ ಸಾಹಿತ್ಯ ಲೋಕದ ಅತೀ ದೊಡ್ಡ ಹೆಸರು, ಆದರೆ ಇಂದು ಅಕ್ಕಮಹಾದೇವಿ ಕೇವಲ ಕರ್ನಾಟಕಕ್ಕೆ, ದೇಶಕ್ಕೆ ಮಾತ್ರ ಸೀಮಿತವಾಗದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ದೆಹಲಿ ಕನ್ನಡ ವಿದ್ಯಾಸಂಸ್ಥೆಯ ಮಾಜಿ ಕಾರ್ಯದರ್ಶಿ ಹಾಗೂ ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯವಾದಿ ಶ್ರೀ ಎಸ್.ಕೆ. ಕುಲಕರ್ಣಿ ಅವರಿಗೆ “ವಿಶಿಷ್ಟ ಕನ್ನಡಿಗ” ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರದ ಮಾಜಿ ಸಚಿವೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಶಾಲು ಹೊದಿಸಿ, ಫಲಕ, ಗಂಧದ ಹಾರ ಮತ್ತು ಪುಷ್ಪಗುಚ್ಛ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಹಾಜರಿದ್ದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕುಲಕರ್ಣಿ ಅವರು ದೆಹಲಿ ಕರ್ನಾಟಕ ಸಂಘವನ್ನು ಕಟ್ಟಿ ಬೆಳೆಸಿದ ಹಿರಿಯರನ್ನು ನೆನಪಿಸಿಕೊಂಡರು. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಸಂವಿಧಾನ ಪ್ರಕಾರವಾಗಿ ಚುನಾವಣೆಯನ್ನು ಚಾಚೂ ತಪ್ಪದೇ ನಡೆಸಿಕೊಂಡು ಬರುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆ ಎಂದರು. ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ನೀಡಿದ ದೆಹಲಿ ಕರ್ನಾಟಕ ಸಂಘಕ್ಕೆ ಅಭಿನಂದನೆ ಸಲ್ಲಿಸಿ, ಈಗಿನ ಕಾರ್ಯಕಾರಿ ಸಮಿತಿ ಉತ್ತಮ ಕೆಲಸ ಮಾಡುತ್ತಿದ್ದು, ಕರ್ನಾಟಕದ ಕುರಿತು ವಿವಿಧ ಚರ್ಚಾಗೋಷ್ಠಿಗಳನ್ನು ನಡೆಸುವ ಅವಶ್ಯಕತೆ ಇದೆ ಎಂದರು.

ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಎಲ್ಲಾ ಕನ್ನಡಿಗರ ಸಹಕಾರದಿಂದ ಅತ್ಯುತ್ತಮ ಕಾರ್ಯಕ್ರಮಗಳನ್ನು ನಡೆಸಲು ಪ್ರಯತ್ನಿಸಲಾಗುತ್ತಿದ್ದು, ಈ ಬಾರಿ 3 ಲಕ್ಷ ರೂಪಾಯಿಗಳ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು. ದಿ.ಕೆ.ಆರ್.ನಾಗರಾಜ ನೆನಪಿನ ವಿದ್ಯಾರ್ಥಿ ವೇತನ ನಿಧಿಯನ್ನು 10 ಲಕ್ಷ ರೂಪಾಯಿಗಳಿಗೆ ಏರಿಸಲು ಪ್ರಯತ್ನಿಸಲಾಗುತ್ತಿದೆ ಎಂದರು.

ದೆಹಲಿ ಕರ್ನಾಟಕ ಸಂಘದ ಪ್ರಾರಂಭದ ದಿನಗಳಲ್ಲಿ ಸಂಘದ ಬೆಳವಣಿಗೆಗಾಗಿ ಶ್ರಮಿಸಿದ ಅಧ್ಯಕ್ಷರುಗಳಾದ ದಿ. ನರಹರಿ ರಾವ್, ದಿ. ಎ.ವಿ. ಪೈ, ದಿ. ಡಾ. ವಿ.ಕೆ.ಆರ್.ವಿ. ರಾವ್, ದಿ. ರಾಘವನ್, ದಿ. ವಿ. ಕೃಷ್ಣಮೂರ್ತಿ ರಾವ್ ಇವರುಗಳನ್ನು ಸ್ಮರಿಸುವ ಸಲುವಾಗಿ ತಲಾ ಒಬ್ಬ ವಿದ್ಯಾರ್ಥಿಗೆ ಮತ್ತು ದಿ. ಶ್ರೀ ಕೆ.ಆರ್. ನಾಗರಾಜ ನೆನಪಿನ ವಿದ್ಯಾರ್ಥಿ ವೇತನವನ್ನು ಇಬ್ಬರು ವಿದ್ಯಾರ್ಥಿಗಳಿಗೆ ನೀಡಲಾಯಿತು. ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್‌ನಲ್ಲಿ 10ನೇ ತರಗತಿಯಲ್ಲಿ ಅತ್ಯಂತ ಗರಿಷ್ಠ ಅಂಕವನ್ನು ಪಡೆದ ಮಾಸ್ಟರ್ ಸಾಯಿಪ್ರಸಾದ್ ಬಿ. ಅವರಿಗೆ ದಿ. ಶ್ರೀ ಜಿ.ಎಸ್. ಅಶ್ವಥ್ ಮೆಮೋರಿಯಲ್ ಮತ್ತು ದಿ. ಶ್ರೀ ಈಶ್ವರಪ್ಪ ಮುರಗೋಡ ಮೆಮೋರಿಯಲ್ ವಿದ್ಯಾರ್ಥಿ ವೇತನವನ್ನು ನೀಡಿ ಗೌರವಿಸಲಾಯಿತು. ವಿದ್ಯಾರ್ಥಿ ವೇತನಕ್ಕೆ ಒಟ್ಟು 106 ಅರ್ಜಿಗಳು ಬಂದಿತ್ತು. ವಿದ್ಯಾರ್ಥಿವೇತನಕ್ಕೆ ಬಂದಿರುವ ಅರ್ಜಿಗಳನ್ನು ಪರಿಶೀಲಿಸಲು ಕಾರ್ಯಕಾರಿ ಸಮಿತಿಯ ನಿರ್ಧಾರದಂತೆ ಶ್ರೀ ಈಶ್ವರ ಭಟ್ ಕೆ., ಶ್ರೀ ಅರವಿಂದ ಬಿಜೈ, ಶ್ರೀಮತಿ ಹೇಮಲತಾ, ಜಂಟಿ ಕಾರ್ಯದರ್ಶಿ, ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಮತ್ತು ಡಾ. ವೈ. ಅವನೀಂದ್ರನಾಥ್, ಕೋಶಾಧಿಕಾರಿ ಅವರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿತ್ತು.

ಕಾರ್ಯಕ್ರಮದ ಆರಂಭದಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಅವರು ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದನಾರ್ಪಣೆ ಸಲ್ಲಿಸಿದರು. ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಎಂ. ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಅ

*ಅಭಿಮತ ವರದಿ*



## ಮುನ್ನೋಟ

ಯುಗ ಯುಗಾದಿ ಕಳೆದರು, ಯುಗಾದಿ ಮರಳಿ ಬರುತ್ತಿದೆ, ಹೊಸ ವರ್ಷ ಹಾಗೂ ಯುಗಾದಿ ಹಬ್ಬದ ಶುಭಾಶಯಗಳು. ಮಾರ್ಚ್ ತಿಂಗಳು ಶೈಕ್ಷಣಿಕ ವರ್ಷದ ಕೊನೆಯ ತಿಂಗಳು ಹಾಗೆಯೇ ಆರ್ಥಿಕ ವರ್ಷ ಕೂಡಾ ಮುಗಿಯುತ್ತದೆ. ಮಕ್ಕಳಿಗೆ ಪರೀಕ್ಷೆ ಮುಗಿದಿದೆ, ಒಂದು ತಿಂಗಳ ನಂತರ ತಮ್ಮ ಹುಟ್ಟೂರಿಗೆ ಹೋಗಲು ಕೆಲ ಕನ್ನಡಿಗರ ತವಕ. ವರ್ಷಕ್ಕೊಮ್ಮೆ ದೆಹಲಿಯಿಂದ ಒಂದು ತಿಂಗಳಿಗೆ ತಮ್ಮ ಹುಟ್ಟೂರಿಗೆ ಹೋದರೆ ಎಲ್ಲವನ್ನು ಮರೆತು ಆನಂದಿಸುತ್ತೇವೆ. ಅದೇ ರೀತಿ ದೆಹಲಿ ಕರ್ನಾಟಕ ಸಂಘದ ಮಹಿಳಾ ದಿನಾಚರಣೆ ಕಾರ್ಯಕ್ರಮ ಏಪ್ರಿಲ್ ತಿಂಗಳಲ್ಲಿ ನಡೆಯಲಿದೆ. ಸ್ಥಳೀಯ ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಿ. 2013–14ನೇ ಸಾಲಿನ ವಿವಿಧ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದೆ. ಈ ಕುರಿತು ಮಾಹಿತಿಯನ್ನು ಪ್ರತ್ಯೇಕವಾಗಿ ಕಳುಹಿಸಿಕೊಡಲಾಗಿದೆ. ದಯವಿಟ್ಟು ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ತಮಗೆಲ್ಲಾ ಬಣ್ಣದ ಹಬ್ಬ ಹೋಳಿಯ ಶುಭಾಶಯಗಳು. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

........................................

ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಕ್ರೀಡೋತ್ಸವವು ಮಾರ್ಚ್ 16,22,23, ಮತ್ತು 30, 2014ರಂದು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಹಳೆ ಕ್ಯಾಂಪಸ್ಸಿನ ಗ್ರೌಂಡ್‌ನಲ್ಲಿ ನಡೆಸಲಾಗುವುದು. ಭಾಗವಹಿಸುವ ವ್ಯಕ್ತಿಗಳು ಮತ್ತು ತಂಡಗಳು ತಮ್ಮ ಹೆಸರನ್ನು ಮಾರ್ಚ್ 15ರ ಒಳಗೆ ನೋಂದಾಯಿಸಬಹುದು. ಹೆಚ್ಚಿನ ವಿವರಗಳಿಗೆ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಬಹುದು. : **8860848584 / 8860848585 – 011–26109615 / 65643615**

## ಉಚಿತ ವೈದ್ಯಕೀಯ ತಪಾಸಣೆ



ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಡಾ. ಸಾಯಿಪ್ರಶಾಂತಿ ಶೆಟ್ಟಿ ಅವರು ಮಾರ್ಚ್ 22ರ ಶನಿವಾರದಂದು ಸಂಜೆ 4 ರಿಂದ 5 ಗಂಟೆಯವರೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆ ನೀಡಲಿದ್ದಾರೆ.
ಮುಂದಿನ ತಿಂಗಳಿನಿಂದ ಪ್ರತಿ ಮೂರನೆಯ ಭಾನುವಾರದಂದು ಸಂಜೆ 4.00ರಿಂದ 5.00 ಗಂಟೆಯವರೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆ ನೀಡಲು ಇವರು ಲಭ್ಯವಿರುತ್ತಾರೆ. ಜನಕಪುರಿಯ ಸ್ಪಿರಿಚ್ಯುಯಲ್ ಲೀವಿಂಗ್ ಆಯುರ್ವೇದಿಕ್ ಸೆಂಟರ್ ಫಾರ್ ಆರ್ಟ್ ಆಫ್ ಲೀವಿಂಗ್‌ನಲ್ಲಿ ಮುಖ್ಯ ಸಲಹೆಗಾರರಾಗಿ ಕೆಲಸ ಮಾಡಿರುವ ಇವರು 2008ರಿಂದ ದ್ವಾರಕದಲ್ಲಿ ತಮ್ಮದೇ ಅದ ಆಗಸ್ತ್ಯ ಆಯುರ್ವೇದ ಮತ್ತು ಯೋಗ ಕ್ಲಿನಿಕ್‌ನ್ನು ನಡೆಸುತ್ತಿದ್ದಾರೆ. ಎಲ್ಲರೂ ಈ ಉಚಿತ ವೈದ್ಯಕೀಯ ತಪಾಸಣೆಯ ಲಾಭವನ್ನು, ಮುಖ್ಯವಾಗಿ ಮಹಿಳೆಯರು ಪಡೆಯಬಹುದಾಗಿದೆ.

### ಹಿಂದೂಸ್ತಾನಿ ಸಂಗೀತ

ಪಂಡಿತ್ ಸೋಮನಾಥ್ ಮರಡೂರ್ ಅವರಿಂದ ಹಿಂದೂಸ್ತಾನಿ ಸಂಗೀತ ತರಗತಿಗಳು ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ

### ತಬಲಾ ಕಲಿಕೆ.

ಶ್ರೀ ಸುಧೀರ್ ಫಡ್ನೀಸ್ ಅವರಿಂದ ತಬಲಾ ಕಲಿಕೆ ತರಗತಿ ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ.

ಆಸಕ್ತಿಯುಳ್ಳವರು ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿ : 26109615 / 65643615 8860848584 / 8860848585

### ವೈದ್ಯಕೀಯ ಸಲಹೆಗಳು

**ಡಾ. ಭೀಮ್ ಭಟ್** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 30 ಮಾರ್ಚ್ 2014 ರಂದು ಸಾಯಂಕಾಲ 4 ಗಂಟೆಯಿಂದ.
**ಡಾ. ನಿರಂಜನ್ ನಾಯ್ಕ್** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 16 ಮಾರ್ಚ್ 2014ರಂದು ಬೆಳಿಗ್ಗೆ 10 ಗಂಟೆಯಿಂದ

21ರಿಂದ27 **ಮಾರ್ಚ್ 2014** ಸಂಗಮೇಶ ಬಗಲಿ **ಅವರಿಂದ ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಚಿತ್ರಕಲಾ ಪ್ರದರ್ಶನ.**

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848584 / 8860848585 – 011–26109615 / 65643615

## ಸಂಘದಲ್ಲಿ 'ಪ್ರಹ್ಲಾದ ಚರಿತ್ರೆ' ಹರಿಕಥೆ

ಶಿರಸಿಯ ಖ್ಯಾತ ವಿದ್ವಾನ್ ಶಂಕರಭಟ್ಟ ಉಂಚಳ್ಳಿ ಅವರಿಂದ ಇದೇ ಫೆಬ್ರವರಿ 28ರಂದು ದೆಹಲಿ ಕರ್ನಾಟಕ ಸಂಘದಲ್ಲಿ 'ಪ್ರಹ್ಲಾದ ಚರಿತ್ರೆ' ಹರಿಕಥೆ ಕಾರ್ಯಕ್ರಮ ನಡೆಯಿತು. ಕೀರ್ತನಾ ಕಲಾ ಕ್ಷೇತ್ರದಲ್ಲಿ ಎರಡು ದಶಕಗಳಿಂದ ಸೇವೆ ಸಲ್ಲಿಸುತ್ತಾ ಬಂದಿರುವ ಇವರು ಶ್ರೀ ಸಂತ ಭದ್ರಗಿರಿ ಅಚ್ಯುತದಾಸರ ಶಿಷ್ಯರು. ಮಹಾನಗರಗಳಲ್ಲಿ ಇಂತಹ ಕಾರ್ಯಕ್ರಮಗಳು ಜರಗುವುದು ಕಡಿಮೆ ಬಹಳ ಸಮಯದ ನಂತರ ಸಂಘದಲ್ಲಿ ಹರಿಕಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಎಂದು ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ತಿಳಿಸಿದರು. ಅವರು ಶಂಕರ ಭಟ್ಟ ಮತ್ತು ಬಳಗದವರನ್ನು ಅಭಿನಂದಿಸಿದರು. ಸಂಘದ ಮಾಜಿ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸಂಘದ ಸ್ಮರಣಿಕೆ ನೀಡಿ ಗೌರವಿಸಿದರು. ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಶಂಕರ ಭಟ್ಟರನ್ನು ಪರಿಚಯಿಸಿ ಸ್ವಾಗತಿಸಿದರು.
ಇದೇ ಸಂದರ್ಭದಲ್ಲಿ ಶಂಕರ ಭಟ್ಟರ ಪುತ್ರಿ ಕು. ಶಾಂಭವಿ ಭಟ್ ಒಂದು ಹಾಡನ್ನು ಹಾಡಿ ರಂಜಿಸಿದರು.




ಕನ್ನಡ ಮತ್ತು ಸಂಸ್ಕೃತ ಉಭಯ ಭಾಷಾ ಕೀರ್ತನಕಾರರಾಗಿರುವ ಶಂಕರ ಭಟ್ಟ ಅವರ ಹರಿಕಥೆ ಕೇಳುಗರ ಮೆಚ್ಚುಗೆ ಗಳಿಸಿತು. ಅ

**ಡಾ. ವೈ. ಅವನೀಂದ್ರನಾಥ್ ರಾವ್**

# ಸಂಘದಲ್ಲಿ ಮಾಸ್ತಿ ಸಂಸ್ಮರಣೆ

ಸಾಮಾನ್ಯರಿಗೂ, ಮಹಾತ್ಮರಿಗೂ ಇರುವ ಭೇದ ಅಂದರೆ ಮಹಾತ್ಮನು ತಾನು ಏನನ್ನು ಆಲೋಚಿಸುತ್ತಾನೋ ಅದನ್ನೇ ಆಡುತ್ತಾನೆ, ತಾನು ಏನನ್ನು ಆಡುತ್ತಾನೋ ಅದನ್ನೇ ಮಾಡುತ್ತಾನೆ. ಆದರೆ ಆಲೋಚಿಸುವುದೇ ಒಂದು, ಆಡುವುದೇ ಇನ್ನೊಂದು ಮತ್ತು ಮಾಡುವುದೇ ಮತ್ತೊಂದು ಸಾಮಾನ್ಯನ ಲಕ್ಷಣವಾಗಿದೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಮಹಾತ್ಮರ ಸಾಲಿಗೆ ಸೇರಿದವರು. ಅವರು ಏನನ್ನು ಯೋಚಿಸಿದ್ದಾರೋ ಅದನ್ನೇ ಬರೆದಿದ್ದಾರೆ. ಬರೆದಿರುವುದನ್ನು ಬಾಳಿ ತೋರಿಸಿದ್ದಾರೆ. ಆದರ್ಶಗಳಿಗೆ ಒಂದು ದಾರಿದೀಪವಾಗಿ ಸಮಾಜವನ್ನು ನಡೆಸಿದ್ದಾರೆ ಎಂದು ದೆಹಲಿ ಸೆಷನ್ಸ್ ಕೋರ್ಟಿನ ನ್ಯಾಯಮೂರ್ತಿ ಶ್ರೀ ಎ.ಎಸ್. ಜಯಚಂದ್ರ ಅವರು ಹೇಳಿದರು. ಅವರು ದೆಹಲಿ ಕರ್ನಾಟಕ ಸಂಘ, ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪ್ರತಿಷ್ಠಾನ, ಕೋಲಾರ ಹಾಗೂ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ದೆಹಲಿಯಲ್ಲಿ ಇದೇ ಫೆಬ್ರವರಿ 1 ರಂದು ನಡೆದ ಮಾಸ್ತಿ ಸಂಸ್ಮರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತಾಡುತ್ತಿದ್ದರು.

ಮಾಸ್ತಿ ಅವರು 1891ರಲ್ಲಿ ಸಾಮಾನ್ಯ ಕುಟುಂಬದಲ್ಲಿ ಜನಿಸಿ ಊಟಕ್ಕೂ ಕಷ್ಟವಿದ್ದ ಕಾಲದಲ್ಲಿ ವಾರಾನ್ನಗಳನ್ನು ಮಾಡಿಕೊಂಡು ಓದಿ ಕುಶಾಗ್ರಮತಿಯಾಗಿ ಎಲ್ಲಾ ಪರೀಕ್ಷೆಗಳಲ್ಲಿ ಮುಂಚೂಣಿಯಲ್ಲಿದ್ದರು. ಅಸಮಾನ್ಯವಾಗಿದ್ದ ಐಸಿಎಸ್ ಪರೀಕ್ಷೆಯು ಆ ಕಾಲದಲ್ಲಿ ಲಂಡನ್‌ನಲ್ಲಿ ನಡೆಯುತ್ತಿತ್ತು. ಅದನ್ನು ಪಾಸ್ ಮಾಡಿದ ಮಾಸ್ತಿಯವರು ಕಂದಾಯ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮೀಶನರ್ ಆಗಿ ಸೇರಿ ಅತ್ಯಂತ ಉನ್ನತ ಹುದ್ದೆಯನ್ನು ಅಲಂಕರಿಸಿದರು. ವೃತ್ತಿ ಜೀವನದ ಉಚ್ಛ್ರಾಯ ಸ್ಥಿತಿಯಲ್ಲಿರುವಾಗ ಕನ್ನಡದ ಸೇವೆಗಾಗಿ ಸ್ವಅಪೇಕ್ಷೆಯಿಂದ ಕೆಲಸಕ್ಕೆ ರಾಜೀನಾಮೆ ಕೊಟ್ಟು 'ಜೀವನ' ಪತ್ರಿಕೆಯನ್ನು ಸ್ಥಾಪಿಸಿ ಬಹಳಷ್ಟು ಬರಹಗಾರರನ್ನು ಪ್ರೋತ್ಸಾಹಿಸಿದರು. ದ.ರಾ. ಬೇಂದ್ರೆ, ಕುವೆಂಪು ಅವರ ಕಾವ್ಯಗಳನ್ನು ಪ್ರಕಟಮಾಡಿದ ಘನತೆಗೂ ಮಾಸ್ತಿಯವರು ಪಾತ್ರರಾಗಿದ್ದಾರೆ ಎಂದು ಶ್ರೀ ಜಯಚಂದ್ರ ಅವರು ಹೇಳಿದರು.

ಮಾಸ್ತಿಯವರ ಕುರಿತು ಪ್ರತ್ಯಕ್ಷವಾಗಿ ನೋಡಿದನ್ನು ಮತ್ತು ಪರೋಕ್ಷವಾಗಿ ಕೇಳಿದನ್ನು ಗಮನಿಸಿದಾಗ ಮಾಸ್ತಿಯವರು ಎಂತಹ ಉದಾತ್ತ ವ್ಯಕ್ತಿ ಹಾಗೂ ಎಂತಹ ಉನ್ನತ ಶ್ರೇಣಿಯಲ್ಲಿದರು ಎಂದು ಆಶ್ಚರ್ಯವಾಗುತ್ತದೆ. ಒಂದೆಡೆ ಕತೆಗಳು, ನೀಳ್ಗತೆಗಳು, ಪ್ರಬಂಧಗಳು, ಕಾವ್ಯಗಳು, ಪದ್ಯ ರಚನೆ ಗದ್ಯ ರಚನೆ, ಕಾದಂಬರಿಗಳು ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ನಿಷ್ಣಾತರಾಗಿ ಆದರ್ಶಮಯವಾದ ನೀತಿಯುತವಾದ ಜೀವನವನ್ನು ನಡೆಸಿ ಅಂತಹ ಜೀವನವನ್ನು ಸಾಹಿತ್ಯದ ಮೂಲಕ ಜನಕ್ಕೆ ಹಂಚಿದರು. ಕರ್ನಾಟಕದ ಏಕೀಕರಣಕ್ಕಾಗಿ, ನವೋದಯ ಸಾಹಿತ್ಯಕ್ಕಾಗಿ ಅವರು ದುಡಿದುದನ್ನು ನೆನೆದಾಗ ಮೈ ಜುಂ ಎಂದನಿಸುತ್ತದೆ ಎಂದು ಶ್ರೀ ಜಯಚಂದ್ರ ಅವರು ನುಡಿದರು.

ಮಾಸ್ತಿಯವರ ಜತೆ ನಿಕಟವಾದ ಸಂಬಂಧವನ್ನು ಹೊಂದಿ ಮಾಸ್ತಿಯವರ ಸಮಗ್ರವಾದ ಸತ್ವವನ್ನು ಪ್ರಕಟಣೆಮಾಡಿ ಅದರ ಕುರಿತು ಕೂಲಂಕುಶಅಧ್ಯಯನ ಮಾಡಿರುವಂತಹ ಮಹಾಪಂಡಿತರಾದ ಮಾವಿನಕೆರೆ ರಂಗನಾಥನ್ ನಂತಹ ವಿದ್ವಾಂಸರಿಂದ ಸೇರಿದ ಈ ವಿಚಾರ ಸಂಕಿರಣವು ಯಶಸ್ವೀ ಪ್ರಯತ್ನವಾಗಿದೆ ಎಂದು ಶ್ರೀ ಜಯಚಂದ್ರ ಅವರು ಶ್ಲಾಘಿಸಿದರು.

ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪ್ರತಿಷ್ಠಾನ, ಕೋಲಾರದ ಅಧ್ಯಕ್ಷರಾದ ಹಿರಿಯ ಬರಹಗಾರ ಮಾವಿನಕೆರೆ ರಂಗನಾಥನ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ ಕನ್ನಡಿಗರಿಗೆಲ್ಲರಿಗೂ ಪರಿಚಿತವಾಗಿರುವ ಮಾಸ್ತಿಯವರ ಕೃತಿಗಳನ್ನು ಜಗತ್ತಿಗೆ ಪರಿಚಯಿಸುವ ಕಾರ್ಯವಾಗಬೇಕು ಎಂದರು. ಕರ್ನಾಟಕ ಸರಕಾರದ ನಿವೃತ್ತ ಕಾರ್ಯದರ್ಶಿ ಶ್ರೀ ಜಿ.ಎಚ್. ಗೋಪಾಲ ಗೌಡ ಅವರೂ ಮಾತಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸದಸ್ಯ ಕಾರ್ಯದರ್ಶಿ ಶ್ರೀ ಬಿ.ಎಸ್. ವೆಂಕಟಾಚಲಪತಿ ಅವರು ಉಪಸ್ಥಿತರಿದ್ದರು.

ಮಾಸ್ತಿಯವರ ಕಾವ್ಯದ ಕುರಿತು ಕನ್ನಡದ ಖ್ಯಾತ ಕವಿ ಬಿ.ಆರ್. ಲಕ್ಷ್ಮಣರಾವ್ ಹಾಗೂ ಮಾಸ್ತಿಯವರ ಸಣ್ಣ ಕಥೆಗಳ ಕುರಿತು ಖ್ಯಾತ ವಿಮರ್ಶಕ ಎಸ್.ಆರ್. ವಿಜಯ ಶಂಕರ್ ಅವರು ಪ್ರಬಂಧ ಮಂಡಿಸಿದರು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಪ್ರಾಸ್ತಾವಿಕವಾಗಿ ಮಾತಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಸ್ವಾಗತಿಸಿದರು. ಉಪಾಧ್ಯಕ್ಷೆ ಆಶಾಲತಾ ಎಂ., ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್, ಜಂಟಿ ಕಾರ್ಯದರ್ಶಿ ಎಸ್.ಸಿ. ಹೇಮಲತಾ ಅವರು ಅತಿಥಿಗಳಿಗೆ ಹೂಗುಚ್ಛ ನೀಡಿ, ಶಾಲು ಹೊದಿಸಿ ಗೌರವಿಸಿದರು. ಪಿ.ಸಿ. ಶ್ರೀನಿವಾಸ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ನಂತರ ವಿದ್ವಾನ್ ಕೋಲಾರ ರಮೇಶ್, ಜಯ ನಾಟ್ಯ ಕಲಾ ಅಕಾಡೆಮಿ, ಕೋಲಾರ ಅವರಿಂದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಆಯ್ದ ಕವನಗಳ ನೃತ್ಯ ರೂಪಕ ನಡೆಯಿತು. ಅ

***ಅಭಿಮತ ವರದಿ***









# ಮಾಸ್ತಿಯವರ ಕಾವ್ಯ

ದೆಹಲಿ ಕರ್ನಾಟಕ ಸಂಘ, ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪ್ರತಿಷ್ಠಾನ, ಕೋಲಾರ ಹಾಗೂ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ದೆಹಲಿಯಲ್ಲಿ ಇದೇ ಫೆಬ್ರವರಿ 1 ರಂದು ನಡೆದ ಮಾಸ್ತಿ ಸಂಸ್ಮರಣೆ ಕಾರ್ಯಕ್ರಮದಲ್ಲಿ ಕವಿ ***ಬಿ.ಆರ್. ಲಕ್ಷ್ಮಣರಾವ್*** ಅವರು ಮಾಸ್ತಿಯವರ ಕಾವ್ಯದ ಕುರಿತು ಮಂಡಿಸಿದ ಪ್ರಬಂಧದ ಆಯ್ದ ಭಾಗ.

ಮಾಸ್ತಿಯವರು ತುಂಬಾ ದೊಡ್ಡ ಚೇತನ. ಅದರಲ್ಲಿ ಎರಡು ಮಾತಿಲ್ಲ. ಅವರು ಕತೆ ಕಾದಂಬರಿಗಳ ರಚನೆಯೊಂದಿಗೆ ಸಾಂಸ್ಕೃತಿಕವಾಗಿಯೂ ಬಹಳಷ್ಟು ಮಾಡಿದ್ದಾರೆ. ಹಾಗಾಗಿ ಅವರು ಕನ್ನಡದ ಆಸ್ತಿಯೇ. ನಮ್ಮ ವಿಮರ್ಶಕರು ಮಾಸ್ತಿಯವರನ್ನು ಕವಿಯಾಗಿ ಅಷ್ಟೊಂದು ಪ್ರಮುಖವಾಗಿ ಸಹಜವಾಗಿಯೇ ಗಮನಿಸಲಿಲ್ಲ.

ಇಪ್ಪತ್ತನೆ ಶತಮಾನದ ಪ್ರಾರಂಭದ ಹಂತದಲ್ಲಿ ಎಲ್ಲಾ ಲೇಖಕರ ಮೇಲೆ ಇಂಗ್ಲೀಷ್ ಸಾಹಿತ್ಯದ ಪ್ರಭಾವ ಗಾಢವಾಗಿತ್ತು. ಹೀಗಾಗಿ ಹೊಸ ಹೊಸ ಸಾಹಿತ್ಯ ಪ್ರಕಾರಗಳು ಕನ್ನಡಕ್ಕೆ ಬಂದವು. ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದಲೇ ನಮ್ಮಲ್ಲಿ ಕಾದಂಬರಿ ಸಣ್ಣಕತೆ, ಪ್ರಬಂಧ, ಜೀವನ ಚರಿತ್ರೆ ಮೊದಲಾದ ಹೊಸ ಪ್ರಕಾರಗಳು ಬಂದವು. ಅದು ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮದ ಕಾಲವಾದುದರಿಂದ ರಾಷ್ಟ್ರಪ್ರೇಮವಿತ್ತು. ಕರ್ನಾಟಕದ ಏಕೀಕರಣದ ಕನಸು ಮತ್ತು ಹಂಬಲ ಎಲ್ಲರಿಗೂ ಇತ್ತು. ಕನ್ನಡ ಕಾವ್ಯಕ್ಕೆ ಮಹತ್ತರವಾದುದನ್ನು ಮಾಸ್ತಿಯವರು ಆ ಕಾಲದಲ್ಲಿ ಮಾಡಿದರು. ಹದಿನೈದು ಕವನ ಸಂಕಲನಗಳನ್ನು ಅವರು ಪ್ರಕಟಿಸಿದರು. ಅದರಲ್ಲಿ ಬೇರೆ ಬೇರೆ ಪ್ರಕಾರದವುಗಳು. ಭಕ್ತಿ ಭಾವ ಗೀತೆಗಳು, ಸಾನೆಟ್‌ಗಳು, ಕಥನ ಕವನಗಳು, ಶ್ರೀರಾಮ ಪಟ್ಟಾಭಿಷೇಕದಂತಹ ಸುದೀರ್ಘ ಕಾವ್ಯಗಳನ್ನು ಅವರು ಬರೆದರು. ಅರುಣ, ತಾವರೆ, ಚೆಲುವು, ಭಿನ್ನಹ ಮುಂತಾದ ಭಕ್ತಿಭಾವಗೀತೆಗಳ ಸಂಕಲನಗಳು, ಅವರು ಪುರಂದರ ದಾಸರ ಕನಕದಾಸರ ದಾಸ ಸಾಹಿತ್ಯದಿಂದ ಪ್ರಭಾವಿತರಾಗಿ ರಚಿಸಿದರು. ಅವೆಲ್ಲವೂ ಗೇಯಗೀತೆಗಳು. ಅವುಗಳಲ್ಲಿ ರಾಗಗಳನ್ನು ಕೂಡಾ ಮಾಸ್ತಿಯವರು ನೀಡಿದ್ದಾರೆ. ಕನಕದಾಸರು, ಪುರಂದರ ದಾಸರು ಬರೆದ ದೇವರ ನಾಮಗಳಿಗೂ ಇವರು ಬರೆದ ಭಕ್ತಿಗೀತೆಗಳಿಗೂ ಆದರೆ ಒಂದು ವ್ಯತ್ಯಾಸವಿದೆ. ಮಾಸ್ತಿಯವರ ಗೀತೆಗಳಲ್ಲಿ ವೈಚಾರಿಕತೆಯಿದೆ. ಕೇವಲ ಅಂಧಶ್ರದ್ಧೆಯಿಂದಾಗಲೀ ಅಥವಾ ಕೇವಲ ಭಕ್ತಿ ಭಾವದಿಂದಾಗಲೀ ಅಲ್ಲ. ಅಲ್ಲಿ ವಿಚಾರವಿದೆ. ದೇವರ ಜತೆ ಸಮಾನವಾಗಿ ಮಾತಾಡಬಲ್ಲ ಒಂದು ಮಾದರಿಯಲ್ಲಿ ಮಾಸ್ತಿಯವರು ಮಾತಾಡುತ್ತಾರೆ.

ಮಾಸ್ತಿಯವರನ್ನು ಓರ್ವ ಕವಿಯಾಗಿ ಸಾಹಿತ್ಯಲೋಕ ಗಮನಿಸಿರುವುದು ಅವರ ಕಥನ ಕವನಗಳ ಮೂಲಕವೇ. ಆ ಕಥನಕವನಗಳಲ್ಲಿ ನವರಾತ್ರಿ, ಗೌಡರಮಲ್ಲಿ, ರಾಮನವಮಿ, ಮೂಕನ ಮಕ್ಕಳು, ಮಾಸ್ತಿಯವರನ್ನು ಕನ್ನಡದ ಕವಿಗಳ ಅಗ್ರಪಂಕ್ತಿಯಲ್ಲಿ ನಿಲ್ಲಿಸಿದಂತಹ ಕೃತಿಗಳು. ಶ್ರೀರಾಮ ಪಟ್ಟಾಭಿಷೇಕ ಮಾಸ್ತಿಯವರು ಬಹಳಷ್ಟು ಸುದೀರ್ಘ ಕಾಲ ಬರೆದು ಮುಗಿಸಿದ ಕೃತಿ. ಅವರು ಯೌವನ, ನಡುವಯಸ್ಸು ಮತ್ತು ಇಳಿವಯಸ್ಸಿನ ಮೂರು ಹಂತಗಳಲ್ಲಿ ಬರೆದರು. ಬಹಳ ಸುದೀರ್ಘವಾದ ಕವಿತೆ ಅದು. ಅದಕ್ಕೆ ಮುಂಚೇನೇ ಅವರು ಆದಿಕವಿ ವಾಲ್ಮೀಕಿ ಅಂತ ವಿಮರ್ಶಾ ಗ್ರಂಥವನ್ನು ಬರೆದರು. ಅಲ್ಲಿ ಏನನ್ನು ಅವರು ಪ್ರಸ್ತಾಪ ಮಾಡಿದ್ದಾರೋ ಅದನ್ನೇ ಕಾವ್ಯರೂಪದಲ್ಲಿ ಅವರು ಶ್ರೀರಾಮ ಪಟ್ಟಾಭಿಷೇಕದಲ್ಲಿ ಕೂಡಾ ನಿರೂಪಿಸಿದ್ದಾರೆ. ಬಹಳ ಮುಖ್ಯವಾಗಿ ಅವರು ಆದಿಕವಿ ವಾಲ್ಮೀಕಿಯಲ್ಲಿ ಹೇಗೆ ಮೂಲ ರಾಮಾಯಣ ಹಲವು ಪ್ರಕ್ಷೇಪ (ಇಂಟರ್‌ಪ್ರಿಟೇಶನ್)ಗಳಾಗಿ ಬೆಳೆದುಕೊಂಡು ಬಂದಿದೆ. ವಾಲ್ಮೀಕಿ ರಾಮಾಯಣದಲ್ಲಿ ಒಂದು ಮಾತು ಬರುತ್ತದೆ. ನನ್ನನ್ನು ಮನುಷ್ಯ ಎಂದು ತಿಳಿದುಕೊಳ್ಳು ಎಂದು ರಾಮನೇ ಹೇಳುತ್ತಾನೆ. ಹೇಗೆ ಒಬ್ಬ ಮನುಷ್ಯ ದೈವತ್ವಕ್ಕೆ ಏರಿದ ಎನ್ನುವುದೇ ವಾಲ್ಮೀಕಿ ರಾಮಾಯಣದ ದರ್ಶನವಾಗುತ್ತದೆ. ಅದನ್ನು ಮತ್ತೆ ಮಾನವೀಕರಿಸುವುದು ಬಹುಷಃ ಮಾಸ್ತಿಯವರ ಗುರಿಯಾಗಿತ್ತು. ಶ್ರೀರಾಮ ಪಟ್ಟಾಭಿಷೇಕದಂತಹ ಸುದೀರ್ಘವಾದ ಕಾವ್ಯದಲ್ಲಿ ಎಲ್ಲಾ ಪವಾಡಗಳನ್ನು ತೆಗೆದು ಬಿಟ್ಟರು. ಮನುಷ್ಯನಾಗಿ ರಾಮ ಒಂದು ದೊಡ್ಡ ವ್ಯಕ್ತಿತ್ವವಾಗಿ ಬೆಳೆದ ಎನ್ನುವುದನ್ನು ಬಹಳ ಮುಖ್ಯವಾಗಿಟ್ಟುಕೊಂಡು ಮಾಸ್ತಿಯವರು ಬರೆದರು.

ಈ ಕಥನಗಳನ್ನು ಸ್ವಲ್ಪ ವಿವರವಾಗಿ ನೋಡುವುದಾದರೆ, ನವರಾತ್ರಿ ಬಗ್ಗೆ ಬಹಳ ವಿಮರ್ಶೆ ಬಂದಿದೆ. ಆ ಕಾಲಕ್ಕೆ ಅದು ಹೊಸ ಪ್ರಯೋಗ ಕೂಡಾ. ಯಾಕೆಂದರೆ ಅದಕ್ಕೆ ಬೇಕಾದಷ್ಟು ಪ್ರೇರಣೆಗಳಿದ್ದವು. ನಮ್ಮಲ್ಲಿಯೇ ಹಿಂದೆ ಪಂಚತಂತ್ರವಿತ್ತು. ಕಥಾನಕಗಳು ಸಂಸ್ಕೃತದಲ್ಲಿದ್ದವು. ಆದರೆ ಮಾಸ್ತಿಯವರಿಗೆ ಮುಖ್ಯವಾಗಿ ಪ್ರೇರಣೆ ಸಿಕ್ಕಿರುವುದು ಜೆಫ್ರಿ ಚೋಸರ್‌ನ ಕ್ಯಾಂಟರ್‌ಬರಿ ಟೇಲ್ಸ್‌ನಿಂದ.

ಮಾಸ್ತಿಯವರ ಎಲ್ಲಾ ಕಥನ ಕವನಗಳಲ್ಲಿ ಅವರು ಮುಖ್ಯವಾಗಿ ಸಾಮಾನ್ಯ ಜನರ ಕಥೆಗಳನ್ನು ಹೇಳುತ್ತಾರೆ. ಮಾಸ್ತಿಯವರಲ್ಲಿ ಕಾಣಬಹುದಾದ ಬಹಳ ಮುಖ್ಯವಾದಂತಹ ಗುಣಗಳೆಂದರೆ ಅವರ ಲಿಬರಲ್ ಮನೋಭಾವ, ಪ್ರಜಾಸತ್ತಾತ್ಮಕ ಹಾಗೂ ಧರ್ಮನಿರಪೇಕ್ಷ ತತ್ವಗಳು. ಮಾಸ್ತಿಯವರು ಜೀವನದ ಮೌಲ್ಯಗಳನ್ನು ತೋರಿಸಿಕೊಡುತ್ತಾ ಅವುಗಳನ್ನು ಜೀವನದಲ್ಲಿ ಉಳಿಸಿಕೊಳ್ಳಬೇಕು ಎನ್ನುವುದರ ಕಡೆ ಗಮನಕೊಡುತ್ತಿದ್ದರು. ಅವ್ರಲ್ಲಿ ಅನುಕಂಪ ಮತ್ತು ಸಹಾನುಭೂತಿ ಇತ್ತು. ಅವರು ಎಲ್ಲೂ ಯಾರ ಬಗ್ಗೆಯೂ ತೀರ್ಪು ಕೊಡಲು ಹೋಗುತ್ತಿರಲಿಲ್ಲ. ಜೀವನದ ಎಷ್ಟೋ ಸಂದರ್ಭಗಳು ಮನುಷ್ಯನಲ್ಲಿ ಇಂತಹ ಕೆಲಸಗಳನ್ನು ಮಾಡಿಸುತ್ತವೆ ಎಂದು ಹೇಳುತ್ತಾರೆ ಹೊರತು ಒಬ್ಬರನ್ನು ಅಪರಾಧಿ ಅಂತ ಹೇಳುವುದಕ್ಕೆ ಹೋಗುವುದಿಲ್ಲ. ಅನುಕಂಪ ನೀಡುವ ಲಿಬರಲ್ ಮನೋಭಾವ ಅವರ ಕಥೆಗಳಲ್ಲಿ ಕಾಣುವಂತೆ ಕಾವ್ಯದಲ್ಲೂ ಕಾಣುತ್ತೇವೆ.

ಮಾಸ್ತಿಯವರ ಕವಿತೆಗಳು ಮಹತ್ವವಾದುದು ಮತ್ತು ಜೀವಪರವಾದುದು. ಸದಾ ಕಾಲ ನಮ್ಮೊಂದಿಗೆ ಇರುವಂತಹದ್ದು. ಅ

***ಅಭಿಮತ ವರದಿ***

# ಮಾಸ್ತಿಯವರ ಕಥೆಗಳು

ದೆಹಲಿ ಕರ್ನಾಟಕ ಸಂಘ, ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪ್ರತಿಷ್ಠಾನ, ಕೋಲಾರ ಹಾಗೂ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ದೆಹಲಿಯಲ್ಲಿ ಇದೇ ಫೆಬ್ರವರಿ 1 ರಂದು ನಡೆದ ಮಾಸ್ತಿ ಸಂಸ್ಮರಣೆ ಕಾರ್ಯಕ್ರಮದಲ್ಲಿ ವಿಮರ್ಶಕ ***ಎಸ್.ಆರ್. ವಿಜಯಶಂಕರ್*** ಅವರು ಮಾಸ್ತಿಯವರ ಕಥೆಗಳ ಕುರಿತು ಮಂಡಿಸಿದ ಪ್ರಬಂಧದ ಆಯ್ದ ಭಾಗ.



ಮಾಸ್ತಿಯವರ ಲೋಕ ಸಮಗ್ರವಾಗಿ ಕಥನ ಲೋಕ. ಅವರ ಕಾದಂಬರಿ, ಕವನ, ಲೇಖನ, ವಿಚಾರ, ವಿಮರ್ಶೆ ಅಥವಾ ರಾಮಾಯಣವಿರಲಿ ಅವರು ಏನನ್ನು ಹೇಳಿದರೂ ಅದನ್ನು ಒಂದು ಕಥನದ ಕ್ರಮದಲ್ಲಿ ಮತ್ತು ಒಂದು ಕಥೆಯ ರೂಪದಲ್ಲಿ ಹೇಳುವಂತಹ ಶಕ್ತಿಯನ್ನು ಹೊಂದಿದ್ದರು. ನಿರಂತರವಾಗಿ ಸತ್ಯಶೋಧನೆಯಲ್ಲಿ ತೊಡಗಿರುವಂತಹ ಮನಸ್ಸು, ಅಂತಹ ಮನಸ್ಸು ಮಾತನಾಡಿದರೂ ಅದ್ಭುತವಾದಂತಹ ಒಂದು ಜ್ಞಾನ ಅದರಷ್ಟಕ್ಕೇ ಅದು ಹುಟ್ಟುತ್ತಿರುತ್ತದೆ, ಎನ್ನುತ್ತಾರೆ ಮಾಸ್ತಿಯವರು. ಅವರು ಈ ಲೋಕದಲ್ಲಿ ಒಳ್ಳೆಯದಕ್ಕೂ ಕೆಟ್ಟದಕ್ಕೂ ನಿರಂತರವಾಗಿ ಒಂದು ಸಂಘರ್ಷ ನಡೆಯುತ್ತಾ ಇರುತ್ತದೆ ಎನ್ನುತ್ತಾರೆ. ಇದು ಕಣ್ಣಿಗೆ ಕಾಣದು. ಆದರೆ ನಮ್ಮ ಮನಸ್ಸಿಗೆ ನಾವು ಯಾವುದರ ಜತೆಗೆ ಇರಬೇಕು ಎಂದು ತಿಳಿದಿರಬೇಕು.



ಒಳ್ಳೆಯದರ ಜತೆಗೆ ಇರಬೇಕೋ ಕೆಟ್ಟದರ ಜತೆಗೆ ಇರಬೇಕೋ–ಅದು ನಿನ್ನದು. ಉಳಿದದ್ದು ದೈವದ್ದು. ಅದಕ್ಕೆ ನೀನು ಏನೂ ಮಾಡಬೇಕಾಗಿಲ್ಲ. ಈ ನಂಬಿಕೆ ಮಾಸ್ತಿಯವರ ಕಥಾಲೋಕದ ಮೂಲಭಿತ್ತಿ. ಒಳ್ಳೆಯದು ಮತ್ತು ಕೆಟ್ಟದರ ಸಂಘರ್ಷದಲ್ಲಿ ಲೋಕದ ಎಲ್ಲಾ ಆಕಾರಗಳು ಅವರಿಗೆ ಸಿಗುತ್ತದೆ. ಅದರ ಆಯ್ಕೆಯನ್ನು ಮಾಡಿಕೊಳ್ಳಲು, ಏನನ್ನೋ ಹೇಳುವುದಕ್ಕಾಗಿ ಕಥೆಯಿರುತ್ತದೆ. ಕಥೆಗಾಗಿ ಕಥೆಯಲ್ಲ. ಮತ್ತೇನನ್ನೋ ಹೇಳುವುದಕ್ಕಾಗಿ ಕಥೆ. ಇದು ನಮ್ಮ ಉಪನಿಷತ್ತಿನ ಕ್ರಮ. ಯಾವುದೋ ಒಂದು ಸತ್ವವನ್ನು, ಯಾವುದೋ ಒಂದು ಸತ್ಯವನ್ನು ಹೇಳಲು ಒಂದು ಕಥೆಯನ್ನು ಬಳಸುತ್ತೇವೆ. ಇದು ಭಾರತೀಯ ಮೂಲಭೂತವಾದ ಕಥೆ. ಸತ್ಯವನ್ನು ಪ್ರತಿಪಾದಿಸಲಿಕ್ಕೆ, ವಿಚಾರವನ್ನು ಹೇಳುವುದಕ್ಕೆ, ಅನುಭವವನ್ನು ತಿಳಿಸಲಿಕ್ಕೆ ನಾವು ಒಂದು ಕಥೆಯ ಮೊರೆ ಹೋಗುತ್ತೇವೆ. ಆದ್ದರಿಂದ ಸಣ್ಣಕಥೆಗಳು ಪಾಶ್ಚಾತ್ಯದೇಶಗಳಲ್ಲಿ ಮೈನರ್ ಪ್ರಕಾರಗಳಾಗಿ ಕಂಡರೂ ಕೂಡಾ, ಸಣ್ಣ ಕಥೆಗಳ ಪಾಶ್ಚಾತ್ಯರೂಪದಲ್ಲಿ ಪ್ರಾರಂಭದಲ್ಲಿ ಮಾಸ್ತಿಯವರ ಕಥೆಗಳು ಕನ್ನಡವನ್ನು ಪ್ರವೇಶಿಸಿದರು ಕೂಡಾ, ಯಾವುದನ್ನು ವಿದ್ವಾಂಸರು ಮೈನರ್‌ವಾದಂತಹ ಒಂದು ಸಾಹಿತ್ಯ ಪ್ರಕಾರ ಅಂತ ಗುರುತಿಸಿದರೋ ಆ ಮೈನರ್ ಆದಂತಹ ಸಾಹಿತ್ಯ ಪ್ರಕಾರದಲ್ಲಿ ಮೇಜರ್ ಆದಂತಹ ವಿಚಾರವನ್ನು ಮಾಸ್ತಿಯವರಿಗೆ ಹೇಳಲು ಸಾಧ್ಯವಾಯಿತು. ಅವರಿಗೆ ಹೀಗೆ ಒಂದು ಚರಿತ್ರೆಯಿಂದ ಬಂದಂತಹ ಕಥಾಲೋಕದ ಪರಿಚಯವಿತ್ತು ಮತ್ತು ಕ್ರಮವಿತ್ತು. ಆದ್ದರಿಂದ ಮಾಸ್ತಿಯವರಲ್ಲಿ ಚರಿತ್ರೆ ಮತ್ತು ವರ್ತಮಾನಗಳು ಒಂದಕ್ಕೊಂದು ಸೇರುತ್ತವೆ. ಇದನ್ನು ಅವರು ಹೇಳುವುದು ಯಾಕೆ ಅಂದರೆ ಚರಿತ್ರೆಯಿರಲಿ, ಪುರಾಣವಿರಲಿ, ವರ್ತಮಾನದ ಇವತ್ತಿನ ಕಾಲವಿರಲಿ ಮನುಷ್ಯನ ನೀತಿ ಅಂಥ ಹೇಳುವುದು ಒಂದು, ನೀತಿಯ ರೂಪಗಳು, ನೀತಿಯ ಕ್ರಮಗಳು ನೀತಿಯ ಸಾಧ್ಯತೆಗಳು ಬದಲಾಗಬಹುದು.

ಮಾಸ್ತಿಯವರ 'ಹೇಮಕೂಟದಿಂದ ಬಂದ ಮೇಲೆ' ಕಥೆಯು ಇತಿಹಾಸ ಮತ್ತು ವರ್ತಮಾನವನ್ನು ಒಟ್ಟಿಗೆ ತರುವ ಕಥೆಯಾಗಿದೆ. ಕಥೆಯಲ್ಲಿ ಶಕುಂತಲೆಯು ದುಷ್ಯಂತನ ಮನೆಯಿಂದ ತನ್ನ ತವರು ಮನೆಗೆ ಬರುವ ವಿಚಾರವಿದೆ. ಕಥೆಯಲ್ಲಿ ದೂರ್ವಾಸನ ಶಾಪ, ವಿಶ್ವಾಮಿತ್ರ ಮೇನಕೆ ಕಥೆಯನ್ನು ಸೂಚಿಸುವುದರ ಮೂಲಕ ಅವರು ಪುರಾಣವನ್ನು ಗುರುತಿಸುತ್ತಾರೆ. ಆ ಕಥೆಯ ಆ ಮೇಲಿನ ವಿವರಗಳಲ್ಲಿ ಚರಿತ್ರೆಯ ಎಲ್ಲಾ ರೂಪಗಳನ್ನು ಹೇಳುತ್ತಾರೆ. ಆ ಮೇಲೆ ನಡೆಯುವುದು ವರ್ತಮಾನ. ಇವತ್ತು ಒಬ್ಬ ಹೆಣ್ಣು ಮಗಳು ಮದುವೆಯಾದ ನಂತರ ತನ್ನ ತಾಯಿಯ ಮನೆಗೆ ಬಂದರೆ ಹೇಗಿರುತ್ತಾಳೋ ಆ ಕಥೆ.

'ಗೌತಮಿ ಹೇಳಿದ ಕತೆ' ಎಂಬ ಕಥೆಯಲ್ಲಿ ಗೌತಮಿ ಎಂಬವಳು ಮಾಲಿನಿ ಎಂಬ ಹುಡುಗಿಯ ಕಥೆ ಹೇಳುತ್ತಾಳೆ. ವಿವರಗಳನ್ನು ನೋಡಿದರೆ ಸ್ವಂತ ಎಂಬಂತಿದೆ. ಹೇಳುವುದು ಅನ್ಯವೆಂಬಂತೆ. ಮಾಸ್ತಿಯವರು ತಮ್ಮ ಕಥೆಗಳನ್ನು ಹೇಳಿದ ಕ್ರಮವಿದು. ಸಾಹಿತ್ಯಿಕ ಪರಿಭಾಷೆಯಲ್ಲಿ ಡಿಸ್ಟೆನ್ಸ್ ಅಥವಾ ಅಂತರ ಎನ್ನುವ ಈ ಕ್ರಮ ಒಂದು ಕಥೆಯನ್ನು ಹೇಳುವಾಗ ಆ ಕಥೆಯಿಂದ ದೂರ ನಿಂತು ಅದನ್ನೆಲ್ಲಾ ನೋಡಿಕೊಂಡು, ತೂಗಿಕೊಂಡು ಹೇಳುವ ಕ್ರಮ. ಇದು ಸರಿ ಇದು ತಪ್ಪು ಎಂಬುದನ್ನು ಗಮನಿಸುತ್ತಾರೆ ಆದರೆ ಯಾವುದೇ ನಿರ್ಣಯವನ್ನು ಕೊಡುವುದಿಲ್ಲ. ಈ 'ಅಂತರ' ಎನ್ನುವುದೂ ಕಲೆಗಾರಿಕೆಯ ಶಕ್ತಿ. ಅದನ್ನು ಮಾಸ್ತಿಯವರ ಅನುಭವದಿಂದ ತೆಗೆದು ಅದು ಎಲ್ಲರ ಅನುಭವವಾಗುತ್ತದೆ. ಆ ಎಲ್ಲರ ಅನುಭವವನ್ನಾಗಿ ಒಬ್ಬನ ಅನುಭವವನ್ನು ಪರಿವರ್ತಿಸುವುದು ಈ ಅಂತರದ ಮೂಲಕ ಅಥವಾ ಅನ್ಯವೆಂಬಂತೆ ಹೇಳುವುದರ ಮೂಲಕ. ಇದು ಮಾಸ್ತಿಯವರ ಕಥನ ಕ್ರಮ. ಅ

***ಅಭಿಮತ ವರದಿ***

# ಡಿವಿಜಿ ನಮನ



ಮಂಕುತಿಮ್ಮನ ಕಗ್ಗದ ಅಧ್ಯಯನದಿಂದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನದಲ್ಲಿರುವ ಎಲ್ಲಾ ಕ್ಲೇಷಗಳಿಗೆ ಉತ್ತರ, ಸಮಸ್ಯೆಗಳಿಗೆ ಸಮಾಧಾನ ಮತ್ತು ತಳಮಳಕ್ಕೆ ಶಾಂತಿಯನ್ನು ಪಡೆಯ ಬಹುದು ಎಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಪ್ರಾಧಿಕಾರ ಹಾಗೂ ಕರ್ನಾಟಕ ಸರಕಾರದ ನಿವೃತ್ತ ಅಪರ ಕಾರ್ಯದರ್ಶಿ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಯವರು ಹೇಳಿದರು. ಅವರು ದೆಹಲಿ ಕರ್ನಾಟಕ ಸಂಘ, ಪದ್ಮಭೂಷಣ ಡಿ.ವಿ. ಗುಂಡಪ್ಪ ಪ್ರತಿಷ್ಠಾನ, ಕೋಲಾರ ಹಾಗೂ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ದೆಹಲಿಯಲ್ಲಿ ಇದೇ ಫೆಬ್ರವರಿ 2 ರಂದು ನಡೆದ ಡಿವಿಜಿ ನಮನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತಾಡುತ್ತಿದ್ದರು.



ಮಂಕುತಿಮ್ಮನ ಕಗ್ಗವು ಒಂದು ಜೀವನದರ್ಶನ ಕೃತಿಯಾಗಿದ್ದು ಅದನ್ನು ಪದೇ ಪದೇ ಓದಿ ಮೆಲುಕು ಹಾಕಬೇಕು. ಅದನ್ನು ಅಧ್ಯಯನಶೀಲರಾಗಿ ಓದಿದಾಗ ಅದರೊಳಗಿನಿಂದ ಜ್ಞಾನದ ಬೆಳಕು ದೊರಕುತ್ತದೆ ಎಂದು ಅವರು ಹೇಳಿದರು. ಡಿವಿಜಿಯವರ ಜೀವನ ದರ್ಶನ ನೀಡುವ ಮಂಕುತಿಮ್ಮನ ಕಗ್ಗ, ಮರುಳು ಮುನಿಯನ ಕಗ್ಗದಂತೆ ಅವರ ಒಂದು ಕವನ ವನಸುಮವೂ ಬದುಕಿನ ವಿವಿಧ ಆಯಾಮಗಳನ್ನು ವಿವರಿಸುತ್ತದೆ ಎಂದು ಅವರು ಹೇಳಿದರು.

ಹಿರಿಯ ಬರಹಗಾರ ಮಾವಿನಕೆರೆ ರಂಗನಾಥನ್ ಅವರು ಸಮಾರಂಭದ ಉದ್ಘಾಟನೆ ನೆರವೇರಿಸಿದರು.

ಡಿವಿಜಿಯವರ ಮಂಕುತಿಮ್ಮನ ಕಗ್ಗದ ಕುರಿತು ವಿಷಯ ಮಂಡನೆ ಮಾಡಿದ ಕರ್ನಾಟಕ ಸರಕಾರದ ನಿವೃತ್ತ ಕಾರ್ಯದರ್ಶಿ ಹಾಗೂ ಡಿವಿಜಿ ಪ್ರತಿಷ್ಠಾನದ ಸದಸ್ಯರಾದ ಶ್ರೀ ಜಿ.ಎಚ್. ಗೋಪಾಲಕೃಷ್ಣ ಗೌಡ ಅವರು ನಾಲ್ಕು ಸಾಲುಗಳ 945 ಮುಕ್ತಕಗಳಿರುವ ಮಂಕುತಿಮ್ಮನ ಕಗ್ಗ ನೋಡೊದಕ್ಕೆ ಬಹಳ ಚಿಕ್ಕದಾದ ಗ್ರಂಥವಾದರೂ ಅದರಲ್ಲಿ ಇಡೀ ಬ್ರಹ್ಮಾಂಡವೇ ಅಡಕವಾಗಿದೆ ಎಂದು ಹೇಳಿದರು. ಶ್ರೀ ಗೌಡ ಅವರು ಶಿರಾದಲ್ಲಿ ಜಿಲ್ಲಾಧಿಕಾರಿಯಾಗಿದ್ದಾಗ 1998ರ ಅಕ್ಟೋಬರ್‌ನಲ್ಲಿ ನಡೆದ ಗೋಲಿಬಾರ್ ನಂತರ ಅವರ ವ್ಯಾಕುಲದಲ್ಲಿದ್ದ ಮನಸ್ಸಿಗೆ ನೆಮ್ಮದಿಯನ್ನು ನೀಡಿದ್ದು ಡಿವಿಜಿಯವರ ಮಂಕುತಿಮ್ಮನ ಕಗ್ಗ ಎಂದು ಅವರು ಹೇಳಿದರು. ತಾಳ್ಮೆಯ ಪಾಠವನ್ನು ಹೇಳುವ ಮುಕ್ತಕಗಳಿವೆ. ತನ್ನ ಕರ್ತವ್ಯವನ್ನು ನಿಶ್ಚಿಂತೆಯಿಂದ ಮಾಡಲು ಇದರಿಂದ ಪ್ರೇರಣೆ ದೊರೆಯಿತು ಎಂದು ಅವರು ಹೇಳಿದರು. ತಮ್ಮ ವೃತ್ತಿ ಜೀವನದಲ್ಲಿ ಸಹೋದ್ಯೋಗಿಗಳಿಂದ ಅಥವಾ ಹಿರಿಯ ಅಧಿಕಾರಿಗಳಿಗಿಂತ ಹೆಚ್ಚು ಸಲಹೆ ಮಾರಗದರ್ಶನವನ್ನು ತಾನು ಮಂಕುತಿಮ್ಮನ ಕಗ್ಗದಿಂದ ಪಡೆದೆ ಎಂದರು. ತಾನು ವರ್ಗಾವಣೆಗೊಂಡು ಹೋಗುವಾಗ ಜನರಿಗೆ ಏನಾದರೂ ಸಂದೇಶ ಕೊಡಬೇಕು ಎಂದು ನೋಡುತ್ತಿದ್ದಾಗ ತನಗೆ ತೋಚಿದ್ದು ಈ ಮುಕ್ತಕಗಳೇ ಎಂದರು. ಜೀವನದ ಪ್ರತಿಯೊಂದು ಸಂದರ್ಭದಲ್ಲಿ ಕೂಡಾ ನಮಗೆ ಮಾರ್ಗದರ್ಶನ ಸಿಗುತ್ತದೆ. ಮಂಕುತಿಮ್ಮನ ಕಗ್ಗ ಜನಜೀವನಕ್ಕೆ ಬಹಳ ಹತ್ತಿರವಾದುದು. ಡಿವಿಜಿಯವರು ಪತ್ರಿಕೋದ್ಯಮಿ, ರಾಜಕಾರಣಿ, ಕವಿ, ಚಿಂತಕ ಎಲ್ಲವೂ ಆಗಿದ್ದರು. ಆದುದರಿಂದ ಅವರಿಂದ ಮಂಕುತಿಮ್ಮನ ಕಗ್ಗದಂತಹ ಕೃತಿ ಬರಲು ಸಾಧ್ಯವಾಯಿತು. ಕಗ್ಗದಲ್ಲಿರುವ ಒಂದೊಂದು ಮುಕ್ತಕವೂ ಸ್ವತಂತ್ರ. ಪ್ರತಿಯೊಂದು ಕೂಡಾ ಸ್ವತಂತ್ರ ಎಂದು ಶ್ರೀ ಗೋಪಾಲಕೃಷ್ಣ ಗೌಡ ಅವರು ವಿವರಿಸಿದರು.

ದೆಹಲಿ ಸೆಷನ್ಸ್ ಕೋರ್ಟಿನ ನ್ಯಾಯಮೂರ್ತಿ ಶ್ರೀ ಎ.ಎಸ್. ಜಯಚಂದ್ರ ಅವರು ಮಾತಾಡುತ್ತಾ ಡಿವಿಜಿಯವರು ಮಹಾನ್ ಸಾಹಿತಿ ಹಾಗೂ ಬಹುಮುಖ ಪ್ರತಿಭೆಯ ವ್ಯಕ್ತಿತ್ವ ಹೊಂದಿದವರು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಬಿ.ಟಿ. ಮುನಿರಾಜಯ್ಯನವರು ಈ ಸಂದರ್ಭದಲ್ಲಿ ಮಾತಾಡುತ್ತಾ ಕರ್ನಾಟಕ ಸರಕಾರವು ಸುಮಾರು 18 ಪ್ರತಿಷ್ಠಾನಗಳನ್ನು ಸ್ಥಾಪಿಸುವುದರ ಮೂಲಕ ಸಂಸ್ಕೃತಿ ಮತ್ತು ಸಾಹಿತ್ಯದ ಬಗ್ಗೆ ಅಪಾರವಾದ ಕೊಡುಗೆಯನ್ನು ನೀಡಿದೆ ಎಂದರು.

ಡಿವಿಜಿ ಪ್ರತಿಷ್ಠಾನದ ಸದಸ್ಯರಾದ ಶ್ರೀ ಕೆ. ಪ್ರಹ್ಲಾದ ರಾವ್ ಅವರು ಮಾತನಾಡಿ ಕರ್ನಾಟಕ ಸರಕಾರವು ಸ್ಥಾಪಿಸಿದ ಡಿವಿಜಿ ಪ್ರತಿಷ್ಠಾನವು ಇದೀಗ ತನ್ನ ಮೊದಲ ಕಾರ್ಯಕ್ರಮವನ್ನು ದೆಹಲಿಯಲ್ಲಿ ನಡೆಸುತ್ತಿದೆ ಎಂದು ಹೇಳಿದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ನಿರ್ದೇಶಕರಾದ ಶ್ರೀ ಬಿ.ಎಸ್. ವೆಂಕಟಾಚಲಪತಿ ಅವರು ಉಪಸ್ಥಿತರಿದ್ದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಅತಿಥಿಗಳಿಗೆ ಸ್ಮರಣಿಕೆ ನೀಡಿ ಶಾಲು ಹೊದಿಸಿ ಗೌರವಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಕಾರ್ಯಕ್ರಮ ನಿರೂಪಿಸಿದರು. ಇದೇ ಸಂದರ್ಭದಲ್ಲಿ ವಿದ್ವಾನ್ ಕೋಲಾರ ರಮೇಶ್ ಅವರನ್ನು ಸನ್ಮಾನಿಸಲಾಯಿತು. ಮೂಡಲ ನಾಟ್ಯ ಕಲಾ ಅಕಾಡೆಮಿ, ಕೋಲಾರ ಇಲ್ಲಿನ ಕಲಾವಿದರಿಂದ ಡಿ.ವಿ. ಗುಂಡಪ್ಪನವರ ಆಯ್ದ ಕವನಗಳ ನೃತ್ಯ ರೂಪಕ ನಡೆಯಿತು. ಅ

*ಅಭಿಮತ ವರದಿ*

# ಯುವ ಸಿಂಚನದಲ್ಲಿ

# ಮೆರೆದ ಹೊಸ ಪ್ರತಿಭೆಗಳು





ದೆಹಲಿಯ ಯುವ ಪ್ರತಿಭೆಗಳು ತಮ್ಮ ನೃತ್ಯ ಹಾಗೂ ಹಾಡುಗಳಿಂದ ರೋಮಾಂಚಕ ಸಂಜೆಯನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಫೆಬ್ರವರಿ 8ರಂದು ಪ್ರಸ್ತುತ ಪಡಿಸಿದರು. ಜತೆಗೆ ಕರ್ನಾಟಕದಿಂದ ಬಂದ ಬಾಯ್‌ರ್ಝೋನ್ ಅಕಾಡೆಮಿಯ ತಂಡವು ಸಮಕಾಲೀನ ನೃತ್ಯಶೈಲಿಗಳಿಂದ, ತುಂಬಿ ನೆರೆದಿದ್ದ ಪ್ರೇಕ್ಷಕರ ಮನಸೂರೆಗೊಳಿಸಿತು.

ಸಪ್ನಾ ಅತ್ತಾವರ ಅವರು ಮಹಾವಿಷ್ಣುವಿನ ದಶಾವತಾರವನ್ನು ಮನಮೋಹಕ ಮತ್ತು ಭಕ್ತಿಪ್ರಧಾನವಾಗಿ ನೃತ್ಯರೂಪಕದಲ್ಲಿ ಪ್ರಸ್ತುತ ಪಡಿಸಿದರು. ಸುಂದರ ಸಂಜೆಗೆ ಸುಮಧುರ ಮುನ್ನುಡಿಯಂತೆ ಶೃತಿ ಭಜಂತ್ರಿಯವರು ಘಜಲ್ ಒಂದನ್ನು ತಮ್ಮ ಸುಮಧುರ ಕಂಠದಲ್ಲಿ ಪ್ರೇಕ್ಷಕರ ಮುಂದಿಟ್ಟರು. ಬ್ರೋಕನ್ ಏಂಜಲ್ ಎಂಬ ಸುಂದರ ಗೀತೆಗೆ ಅಮಿತಾ ಮತ್ತು ಅಂಕಿತಾ ದೇವ್ ಅವರು ರಮ್ಯವಾದ ನೃತ್ಯವನ್ನು ಮಾಡಿದರು. ಶುಭಾ ದೇವಿ ಪ್ರಸಾದ್ ಅವರ ಹಾಡುಗಾರಿಕೆ, ದೆಹಲಿಯ ಜನಪ್ರಿಯ ಗಾಯಕಿ ಪೂಜಾ ಪ್ರದೀಪ್ ಅವರ ಜಾನಪದ ಗೀತೆ ಮತ್ತು ಚಂದನಾ ಗೌಡ ಅವರು ದೇವಿಸ್ತುತಿಗೆ ಪ್ರಸ್ತುತ ಪಡಿಸಿದ ಶಾಸ್ತ್ರೀಯ ನೃತ್ಯಗಳು ಎಲ್ಲರನ್ನೂ ರಂಜಿಸಿದವು.

ಬಾಲಿವುಡ್‌ನ ಜನಪ್ರಿಯ ಹಾಡುಗಳಿಗೆ ಕಂಟೆಂಪರರಿ ನೃತ್ಯ ಪ್ರದರ್ಶನವನ್ನು ವಿವಿಧ ಜೋಡಿಗಳು ಪ್ರದರ್ಶಿಸಿದವು. ಸವಿತಾ ನೆಲ್ಲಿ ಮತ್ತು ಶಿಲ್ಪಾ ಹರಿಪ್ರಿಯ, ವಂದನಾ ರೈ ಶೆಟ್ಟಿ ಮತ್ತು ಸಾಯಿಪ್ರಶಾಂತಿ ಶೆಟ್ಟಿ, ಮನೀಶ್ ಪೂಜಾರಿ ಮತ್ತು ಮಿಥುನ್ ಶೆಟ್ಟಿ ಜತೆಗೆ ಸನ್ಮಾನ್ ಗೌಡ ಅವರ ಯುಗಳ ನೃತ್ಯಗಳಿಗೆ ಮತ್ತು ತಾರಾ ರಮೇಶ್, ಸುರಭೀ ಇನಾಮದಾರ್ ಅವರ ಸೋಲೋ ಪ್ರದರ್ಶನಗಳಿಗೆ ಪ್ರೇಕ್ಷಕರ ಕರತಾಡನಗಳು ಮುಗಿಲು ಮುಟ್ಟಿದವು.

ಮಂಗಳೂರಿನ ಬಾಯ್‌ರ್ಝೋನ್ ಅಕಾಡೆಮಿಯ ತಂಡವು ತಮ್ಮ ಬಾಲಿವುಡ್, ಹಿಪ್‌ಹಾಪ್, ಕಂಟೆಂಪರರಿ, ಬಿ–ಬಾಯಿಂಗ್ ಮುಂತಾದ ಶೈಲಿಯ ನೃತ್ಯಗಳಿಂದ ವಿವಿಧ ಟಿವಿ ಚಾನೆಲ್‌ಗಳಲ್ಲಿ ತಮ್ಮ ಜನಪ್ರಿಯತೆಯನ್ನು ಪಡೆದುಕೊಂಡಿದೆ. ದೇಶ ವಿದೇಶಗಳಲ್ಲಿ ಸಾವಿರಾರು ನೃತ್ಯಪ್ರದರ್ಶನಗಳನ್ನು ನೀಡಿದಲ್ಲದೇ ವಿವಿಧ ಪ್ರಶಸ್ತಿಗಳಿಗೂ ಪಾತ್ರವಾಗಿದೆ.

ಆರಂಭದಲ್ಲಿ ಸಮಾರಂಭದ ಮುಖ್ಯ ಅತಿಥಿಯಾಗಿದ್ದ ನೋಯ್ಡಾದಲ್ಲಿರುವ ಜೆ.ಎಸ್.ಎಸ್. ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಟಿ.ಎಂ. ನಾಗಭೂಷಣ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಂಘದ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ, ಉಪಾಧ್ಯಕ್ಷೆ ಆಶಾಲತಾ, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿಯ ಸದಸ್ಯೆ ಪೂರ್ಣಿಮಾ ಗೌಡ ಕಾರ್ಯಕ್ರಮವನ್ನು ನಡೆಸುವಲ್ಲಿ ಸಹಕರಿಸಿದರು. ಪೃಥ್ವಿ ಕಾರಿಂಜೆ ಅವರು ಕಾರ್ಯಕ್ರಮ ನಿರೂಪಿಸಿದರು. ಅ

*ಅಭಿಮತ ವರದಿ*
































# ಮೌಲ್ಯಗಳ ಹುಡುಕಾಟದ ಮೊಯಿಲಿ ರಾಮಾಯಣ

ಕನ್ನಡ ಸಾಹಿತ್ಯ ಪರಿಷತ್ತು, ಮಹಾರಾಷ್ಟ್ರ ಘಟಕದ ಏಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಜರಗಿದ 'ಮಹಾಕಾವ್ಯ ರಾಮಾಯಣ– ತೌಲನಿಕ ಚಿಂತನೆ' ವಿಚಾರಸಂಕಿರಣದಲ್ಲಿ ದೆಹಲಿಯ ಬರಹಗಾರ ***ಡಾ. ವೈ. ಅವನೀಂದ್ರನಾಥ್ ರಾವ್*** ಅವರು ***ಡಾ. ಎಂ. ವೀರಪ್ಪ ಮೊಯಿಲಿಯವರ*** 'ಶ್ರೀ ರಾಮಾಯಣ ಮಹಾನ್ವೇಷಣಂ' ಮಹಾಕಾವ್ಯದ ಕುರಿತು ಮಂಡಿಸಿದ ಪ್ರಬಂಧ ಇಲ್ಲಿದೆ. ಇದನ್ನು ಅಭಿಮತದ ಓದುಗರಿಗೆ ವಿಶೇಷವಾಗಿ ಪ್ರಕಟಿಸಲಾಗಿದೆ.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಮಹರ್ಷಿ ವಾಲ್ಮೀಕಿ ಆದಿಕವಿಯಾದರೆ, ರಾಮಾಯಣ ಆದಿಕಾವ್ಯ ಎನಿಸಿದೆ. ರಾಮಾಯಣದ ರಚನೆಯಿಂದ ಸಂಪ್ರೀತನಾದ ಬ್ರಹ್ಮದೇವರು ಮಹಾಭಾರತವನ್ನು ಬರೆಯುವಂತೆ ವಾಲ್ಮೀಕಿಯನ್ನು ಕೇಳಿದರಂತೆ. ರಾಮಾಯಣ ಬರೆದು ನನ್ನೊಳಗಿನ ಅನುಮಾನ ಮತ್ತು ಪ್ರತಿರೋಧಗಳಿಂದ ಮುಕ್ತನಾಗಿದ್ದೇನೆ. ಮಹಾಭಾರತವನ್ನು ವ್ಯಾಸರು ಬರೆಯುವುದಾದರೆ ಕಾವ್ಯದ ಅಮರತ್ವವನ್ನು ನೀಡುತ್ತೇನೆ ಎಂದು ವಾಲ್ಮೀಕಿ ತಿಳಿಸಿದರಂತೆ.

ಈ ರೀತಿ ಅಮರ ಕಾವ್ಯವೆಂದು ಕರೆಸಿಕೊಂಡ ರಾಮಾಯಣ ಭಾರತೀಯರಿಗೆ ಮಾತ್ರವಲ್ಲ, ವಿಶ್ವದ ಬೇರೆ ಬೇರೆ ಭಾಗದ ಸಮುದಾಯಗಳಿಗೆ ಪ್ರೇರಣೆಯಾದ ಮತ್ತು ಜೀವನದ ದಾರಿಯನ್ನು ತೋರಿಸಿದ ಏಕೈಕ ಕಾವ್ಯವಾಗಿದೆ.

ವಾಲ್ಮೀಕಿ ರಾಮಾಯಣದಿಂದ ತೊಡಗಿ ಈಗಿನ ಮೊಯಿಲಿ ರಾಮಾಯಣದವರೆಗೆ ನೂರಾರು ರಾಮಾಯಣಗಳು ರಚನೆಗೊಂಡಿವೆ. ಇಂಡೋನೇಷ್ಯಾದ ಔವಾನೀಸ್ ರಾಮಾಯಣ, ಫಿಲಿಪೈನ್ಸ್‌ನ ಮಹಾರಾಡಿಯಾ ಲಾವಾನ, ಥೈಲ್ಯಾಂಡ್‌ನ ರಮಾಕೈನ್ ಸೇರಿದಂತೆ ಜಪಾನ್, ಶ್ರೀಲಂಕಾ, ನೇಪಾಳ ಮೊದಲಾದ ಏಷ್ಯಾದ ಹಲವು ದೇಶಗಳ ಸಾಹಿತ್ಯ ಮತ್ತು ಶಿಲ್ಪಕಲೆಗಳಿಗೆ ರಾಮಾಯಣ ಪ್ರೇರಣೆ ಒದಗಿಸಿದೆ. ಈ ಎಲ್ಲ ರಾಮಾಯಣಗಳ ರಚನೆಗಳ ನಡುವೆ ಕಳೆದ ದಶಕದಲ್ಲಿ ಮೂಡಿಬಂದ ಡಾ. ಎಂ. ವೀರಪ್ಪ ಮೊಯಿಲಿಯವರ 'ರಾಮಾಯಣ ಮಹಾನ್ವೇಷಣಂ' ಮಹಾಕಾವ್ಯವು ನಶಿಸಿ ಹೋಗುತ್ತಿರುವ ನೈತಿಕ ಮೌಲ್ಯಗಳನ್ನು ಎತ್ತಿ ಹಿಡಿವ ಈ ಯುಗದ ಬೆಳಕಾಗಿ ಕಾಣಿಸಿದೆ.

ಕಾವ್ಯ ಶೈಲಿಯಲ್ಲಿ ದೇಶೀಯತೆ ಹಾಗೂ ಅಂತರಂಗದಲ್ಲಿ ಬಂಡಾಯ ಮನೋಧರ್ಮ ಮತ್ತು ಪ್ರಗತಿಪರ ವಿಚಾರಧಾರೆಯನ್ನು ಮೊಯಿಲಿ ರಾಮಾಯಣದಲ್ಲಿ ಈಗಾಗಲೇ ಗುರುತಿಸಲಾಗಿದೆ. ಅಲ್ಲದೆ ಚಿತ್ರಕೂಟದ ಪ್ರಕೃತಿಯ ವರ್ಣನೆಯಲ್ಲಿ ಮಾತ್ರವಲ್ಲ, ಲಂಕಾದಹನದ ದುರಂತ ಸನ್ನಿವೇಶದಲ್ಲೂ ಮೊಯಿಲಿ ರಾಮಾಯಣದ ಕಾವ್ಯ ಶಕ್ತಿ ಮತ್ತು ಸೌಂದರ್ಯ ಎದ್ದು ಕಾಣುತ್ತದೆ. ಆದರೆ ನಾನು ಇಲ್ಲಿ ಮೊಯಿಲಿಯವರ ರಾಮಾಯಣ ಇತರ ರಾಮಾಯಣಗಳಿಗಿಂತ ಹೇಗೆ ಭಿನ್ನವಾಗಿದೆ ಮತ್ತು ಅದರ ವಿಶೇಷತೆಗಳೇನು ಎನ್ನುವುದನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದ್ದೇನೆ.

ಹೀಗಿರುವಾಗ ವಾಲ್ಮೀಕಿ ರಾಮಾಯಣ ಮತ್ತು ಹಿಂದಿ ಸಾಹಿತ್ಯದ ಮೇರು ಕೃತಿ ತುಳಸೀದಾಸರ 'ರಾಮಚರಿತ ಮಾನಸ'ದೊಂದಿಗೆ ಮೊಯಿಲಿ ರಾಮಾಯಣವನ್ನು ಹೋಲಿಸಿ ನೋಡಬೇಕು. ಹಾಗೆ ಗಮನಿಸಿದಾಗ ವಾಲ್ಮೀಕಿ ರಾಮಾಯಣದಲ್ಲಿ ಕಾವ್ಯದ ನಾಯಕ ಶ್ರೀರಾಮನು 'ಮರ್ಯಾದಾ ಪುರುಷೋತ್ತಮ'ನಾಗಿ ಬಿಂಬಿತವಾದಂತೆ ಕಾಣುತ್ತದೆ. ಶ್ರೇಷ್ಠ ಆದರ್ಶಗಳನ್ನು ಮೈಗೂಡಿಸಿಕೊಂಡ ಮಾನವನು ದೇವತ್ವವನ್ನು ಹೊಂದುವ ಮತ್ತು ಈ ಬಗೆಯ ಪರಿವರ್ತನೆ ಸಾಧ್ಯ ಎಂಬ ಮೌಲ್ಯವನ್ನು ಮಹಾಕವಿ ವಾಲ್ಮೀಕಿ ಎತ್ತಿ ಹಿಡಿದಿದ್ದಾರೆ.

ತುಳಸೀದಾಸರು ರಾಮಚರಿತ ಮಾನಸದಲ್ಲಿ ಶ್ರೀರಾಮನನ್ನು ನೇರವಾಗಿ ಭಗವಂತನಾಗಿ ಕಾಣುವ ಮೂಲಕ ರಾಮ ಭಜನೆಯೇ ಮುಕ್ತಿಯ ಮಾರ್ಗ ಎಂಬುದನ್ನು ಕಾಣಿಸುತ್ತಾರೆ. ಭಕ್ತಿ ಚಳುವಳಿಯ ಕಾಲದಲ್ಲಿ ಈ ಮಹಾಕಾವ್ಯ ರಚನೆಗೊಂಡಿರುವುದು ಮತ್ತು ಅದರ ಪ್ರಭಾವ ಇರುವುದನ್ನು ಇಲ್ಲಿ ಕಾಣಬಹುದು.

ಈ ಹಿನ್ನಲೆಯಲ್ಲಿ ನೋಡಿದಾಗ ಮೊಯಿಲಿಯವರು ತಮ್ಮ 'ಶ್ರೀ ರಾಮಾಯಣ ಮಹಾನ್ವೇಷಣೆ'ಯಲ್ಲಿ ಮೌಲ್ಯವನ್ನು ಎತ್ತಿ ಹಿಡಿವ ಸಮಾಜದ ಹಿತ ಕಾಯುವ ಆದರ್ಶ ಪುರುಷನಾಗಿ ಶ್ರೀರಾಮನನ್ನು ಕಾಣಿಸುತ್ತಾರೆ ಎಂದು ಅನಿಸುತ್ತದೆ. "ನಿಜವಾದ ಭಾರತದರ್ಶನವು ಮರೆಯಾಗುತ್ತಿರುವ ಈ ಕಾಲದಲ್ಲಿ ಸಮುದಾಯ ಸ್ವೀಕರಿಸಿದ ಮೌಲ್ಯಗಳತ್ತ ಮತ್ತೆ ಬೆಳಕು ಚೆಲ್ಲಿದ್ದೇನೆ" ಎಂದು ಮೊಯಿಲಿಯವರು ಸಮಗ್ರ ಸಂಪುಟವನ್ನು ಲೋಕಾರ್ಪಣೆ ಮಾಡುತ್ತಾ ಬರೆದಿರುವುದು ಇದನ್ನು ಪುಷ್ಟೀಕರಿಸುತ್ತದೆ.

ಮೌಲ್ಯ ಮತ್ತು ಆದರ್ಶಗಳ ಹುಡುಕಾಟ ಈ ಮಹಾಕಾವ್ಯದ ವಿಶಿಷ್ಟತೆ. ಆದ್ದರಿಂದಲೇ ಇದು ಮಹಾನ್ವೇಷಣೆ. ಜಾತ್ಯಾತೀತತೆ, ಸ್ತ್ರೀ ರಕ್ಷಣೆ, ಕರ್ತವ್ಯ ಮೊದಲಾದ ಮೌಲ್ಯಗಳನ್ನು ಮೊಯಿಲಿಯವರು ಕಾವ್ಯಾತ್ಮಕ ಅಭಿವ್ಯಕ್ತಿಯಲ್ಲಿ ನೀಡಿದ ಬಗೆ ಆದರ್ಶ ನಾಗರಿಕತೆಯನ್ನು ನೀಡುವ ಹಂಬಲವನ್ನು ಹೊಂದಿದೆ. ಈ ಹಂಬಲವನ್ನು ಕವಿ,

ತಪಶ್ಚರ್ಯೆ ಧ್ಯಾನ ಯಾಗ ತ್ಯಾಗ ಆತ್ಮಾ
ರ್ಪಣೆಯ, ದಿವ್ಯ ಪಂಚ ತತ್ವಗಳು, ಭಾರತದ
ಜೀವನದ ಪಂಚ ಸ್ತಂಭಗಳಲ್ಲಿ ಶಿಲಾಲಿಪಿಯ
ತೆರದಿ, ಅಚ್ಚುಳಿಯದೆ ಸ್ಥಿರವಾಗಿ ಮೂಡಿರಲು
ಆತ್ಮ ನಿವೇದನೆವಾಗಿಹುದು ಅನುಜ ಲಕ್ಷ್ಮಣನ
ಜೀವನ ಕಥಾಮೃತವು

ಎಂದು ಆರಂಭದಲ್ಲಿಯೇ ಹೇಳುತ್ತಾ ರಾಮಾಯಣದ ಮಹಾನ್ವೇಷಣೆಯಲ್ಲಿ ಲಕ್ಷ್ಮಣನನ್ನು ಮುಖ್ಯ ಪಾತ್ರವಾಗಿಸುವ ಮೂಲಕ ಚಿತ್ರಿಸುತ್ತಾರೆ ಎನ್ನುವುದು ವಿಶೇಷ.

ಪರ್ಣಕುಟೀರದಲ್ಲಿ ಸೀತೆಯಿಲ್ಲ ಎಂಬ ಪರಿತಾಪದಿಂದ ಶ್ರೀರಾಮ ಶೋಕಿಸುತ್ತಿರುವಾಗ ಲಕ್ಷ್ಮಣ ;

"ಪ್ರಾಜ್ಞನಲ್ಲವೆ ನೀನು ದಂಡಕದ ಗರ್ಭದಲಿ
ಸೀತಾಮಾತೆಯನು ಬಿಡದೆ ಅರಸೋಣ, ಎಮಗದೇ
ಮಹಾನ್ವೇಷಣವು"

ಎನ್ನುವುದು ಮುಂದಿನ ಎಲ್ಲ ಮೌಲ್ಯಗಳ ಶೋಧನೆಗಳಿಗೆ ನಾಂದಿಯಾಗುತ್ತದೆ. ಮುಂದೆ ಈ ಮಹಾಪಯಣದಲ್ಲಿ ಶ್ರೀರಾಮ ಲಕ್ಷ್ಮಣರಿಗೆ ಮುಖಾಮುಖಿಯಾಗುವ ಅನೇಕ ಪಾತ್ರಗಳ ಮೂಲಕ ಮಾನವ ಸಂಬಂಧಗಳ ನಿರಂತರ ಶೋಧ ಮತ್ತು ಜಾತ್ಯಾತೀತ ಮೌಲ್ಯಗಳು ಕಾಣಿಸಿಕೊಳ್ಳುವುದು ಗಮನಾರ್ಹ.

ರಾಮನ ದರ್ಶನದಿಂದ ಧನ್ಯಳಾಗುವ ಶಬರಿಯು ಆ ದರ್ಶನಕ್ಕಾಗಿ ಹಲವು ವರ್ಷ ಕಾದು ಕುಳಿತಿರುತ್ತಾಳೆ.

"ಬಡತನದ ದೇಹದಲಿ ಏನು ಕಾಂತಿಯ ಕೂಟ
ಭಕ್ತಿ ಬೃಂದಾವನವೆ ಮನದೊಳಗೆ ಮೂಡಿಹುದು"

ಎನ್ನುತ್ತಾ ಶ್ರೀರಾಮ ಶಬರಿಯನ್ನು ಕೊಂಡಾಡಿದರೆ, ತಾನು ಹೀನಕುಲದವಳು ಎಂಬ ಕೀಳರಿಮೆ ಶಬರಿಯನ್ನು ಕಾಡುತ್ತದೆ. ಶ್ರೀರಾಮ ಹೇಳುತ್ತಾನೆ,

'ವೈಷಮ್ಯ ಭೇದಗಳು ನೀರ್ಗುಳ್ಳೆ ತಾವೆಲ್ಲ
ಜಾತಿ ವಂಶಾವಳಿಗೆ ಗರಿಮೆ ಗಾತ್ರಗಳಿಲ್ಲ'

ಇಲ್ಲಿಯ ಶ್ರೀರಾಮನ ಪ್ರತಿಕ್ರಿಯೆ ಮೂಲಕ ಕವಿಯ ಜಾತ್ಯಾತೀತ ಮೌಲ್ಯಗಳು ಸ್ಪಷ್ಟವಾಗಿ ಕಾಣುತ್ತದೆ. ಜಾತಿ ಆಧಾರಿತ ಅಭಿಮಾನವೆಂಬುದು ನೀರ ಮೇಲಿನ ಗುಳ್ಳೆಯಂತೆ ತಾತ್ಕಾಲಿಕ ಮತ್ತು ನಿರ್ಮಲ ಭಕ್ತಿಯು ತಾರತಮ್ಯವನ್ನು ಅಳಿಸಿ ಹಾಕುತ್ತದೆ ಎನ್ನುವುದು ಗಮನಿಸಬೇಕಾದ ಅಂಶ. 'ಭಕ್ತಿಯೊಳು ಭೇದಗಳು ಕರಗಿ ಹೋಗುವುವೆಲ್ಲ' ಎನ್ನುವುದು ಶಬರಿಯ ಪಾತ್ರದ ಮಹತ್ವವನ್ನೂ ತಿಳಿಸುತ್ತದೆ.

ರಾಮಾಯಣದ ಮುಖ್ಯ ಪಾತ್ರಗಳಾದ ರಾಮ, ಸೀತೆ, ಲಕ್ಷ್ಮಣ, ರಾವಣ ಮತ್ತು ಹನುಮಂತ ಇವು ಎಲ್ಲ ರಾಮಾಯಣ ಪ್ರಕಾರಗಳಲ್ಲೂ ಹಲವು ವಿಧದ ನೋವು, ಸೋಲು, ಗೆಲುವು ಮೊದಲಾದ ಮಿಶ್ರ ಭಾವಗಳನ್ನು ಹೊಂದುತ್ತದೆ. ಅಂತಿಮವಾಗಿ ಈ ಎಲ್ಲವು ದೈವಿಕ ಅರ್ಥವನ್ನು ಪಡೆಯುವ ಪಾತ್ರಗಳಾಗಿ ಹೊರ ಹೊಮ್ಮುತ್ತದೆ. ಆದರೆ ಮೊಯಿಲಿ ರಾಮಾಯಣದಲ್ಲಿ ನನಗೆ ಇದರ ಅತಿರಂಜನೆ ಕಾಣುವುದಿಲ್ಲ. ಬದಲಾಗಿ ಕವಿ ಮೊಯಿಲಿಯವರು ಆ ಪಾತ್ರಗಳ ಆದರ್ಶಗಳು ಮುಖ್ಯವೆನ್ನುವಂತೆ ಅಭಿವ್ಯಕ್ತಿಗೊಳಿಸಿದ್ದಾರೆ.

ಮೊಯಿಲಿ ರಾಮಾಯಣದಲ್ಲಿ ಸೀತೆ ಸುಂದರ ಮತ್ತು ಪರಿಶುದ್ಧ ಮಹಿಳೆ. ಹನುಮಂತ ಸ್ನೇಹಿತ ಮತ್ತು ವಿಶ್ವಾಸಾರ್ಹ ಪುರುಷ. ಲಕ್ಷ್ಮಣ ಸ್ವಯಂ ಸ್ಫೂರ್ತಿ ಮತ್ತು ಆತ್ಮ ವಿಶ್ವಾಸದ ಪ್ರತೀಕ. ರಾವಣ ಅಧಿಕಾರದ ಮದವೇರಿದ ದುರಹಂಕಾರಿ ರಾಜ.

ಇಲ್ಲಿ ರಾವಣ ಹೇಳುತ್ತಾನೆ,

'ಲಂಕೆಯೊಳು ಜತನದಲ್ಲಿ ಪುತ್ರಿಯೊಲು ಕಂಡಿಹೆನು
ಪತಿಗೆ ಒಪ್ಪಿಸುವನಕ ಕಾಪಿಡುವ ದೀಕ್ಷೆಯಿದು'

ರಾವಣನಿಗೆ ಇಲ್ಲಿ ತಾನು ವೀರಪುರುಷನಾಗಿ ಶ್ರೀರಾಮನನ್ನು ಸೋಲಿಸುವುದು ಮುಖ್ಯವೇ ಹೊರತು ಸೀತೆಯನ್ನು ಪಡೆಯುವ ಹಠವಿಲ್ಲ.

ಇತರ ರಾಮಾಯಣದಲ್ಲಿ ಇದ್ದಂತೆ ಇಲ್ಲಿಯೂ ಸೀತೆ ಭೂಮಿಯ ಜೊತೆ ಸಂಬಂಧ ಹೊಂದಿದ್ದಾಳೆ. ಸೀತೆಯ ಪಾವಿತ್ರ್ಯದ ಶಕ್ತಿಯನ್ನು ಸುರಮೆತ್ರಿಜಟಿಯರ ಮೂಲಕ ಕವಿ ಹೇಳುವುದು ಹೀಗೆ,

ತಂಪೀವ ಶ್ರೀಗಂಧ

ಉಷ್ಣವನೆ ಎರಚಿದರು ಚಂದಿರನು ಬೆಂಗದಿರ
ಕರೆದರು ಪಶ್ಚಿಮದಿ ದಿನಕರನು ಪುಟ್ಟಿದರು
ವೃಕ್ಷಗಳು ಕಾಲ್ಮೂಡಿ ಜಂಗಮತೆ ಪಡೆದರೂ
ಒಲಿಯಲಾರಳು ಸೀತೆ ತಾನೆಂದಿಗೂ!

ಅಂದರೆ ಜಗತ್ತಿನ ಎಲ್ಲ ಚರಾಚರ ವಸ್ತುಗಳು ಬದಲಾದರೂ ಸೀತೆ ತಾನು ಪತಿಗೆ ನಿಷ್ಠಳಾಗಿ ವಿಚಲಿತಳಾಗದೆ ಇರುವಳು ಎಂಬ ಆದರ್ಶವನ್ನು ಇಲ್ಲಿ ನೋಡಬಹುದು.

ಸೀತೆ, ಊರ್ಮಿಳೆ, ಸುಮಿತ್ರೆ, ಕೌಸಲ್ಯ, ಮಂಥರೆ, ಅಹಲ್ಯೆ ಮೊದಲಾದ ಸ್ತ್ರೀ ಪಾತ್ರಗಳು ಅನನ್ಯವಾದ ಸ್ತ್ರೀ ಸಹಜ ನಡವಳಿಕೆಯಿಂದ ಚಿತ್ರಣಗೊಂಡಿದೆ ಮತ್ತು ಮಹಿಳಾ ಪರವಾದ ಕಾಳಜಿಗಳು ವಿಶೇಷವಾಗಿ ವ್ಯಕ್ತವಾಗಿದೆ. ತನ್ನ ಸುತ್ತ ನೆರೆದ ಸ್ತ್ರೀಯರೊಂದಿಗೆ ಇಲ್ಲಿ ಸೀತೆ ಹೇಳುತ್ತಾಳೆ,

“ಮುಂದೆಬಹ ನಾರಿಯರು ಎನ್ನಂತೆ ಬವಣೆಯೊಳು
ನೋವನುಣ್ಣುತ ಕಮರಿ ಅಳಿದುಹೋಗದ ತೆರದಿ
ಶೋಷಣೆಯ ಬೇರುಗಳ ಕಿತ್ತು ಬಾಳುವ ತೆರದಿ
ವಿಮೋಚನಾ ಮಾರ್ಗದಲಿ ಯುಗದ ದೀಪ್ತಿಗಳಾಗಿ
ಬಾಳ್ವವೊಲು ಮಾಡುವೆನು ಒಲಿಯೆ ನಾರಿಯು ಅವಳು”

ಇಲ್ಲಿ ಸೀತೆಯ ಪಾತ್ರದ ಮೂಲಕ ಇಡೀ ಸ್ತ್ರೀ ಕುಲದ ವಿಮೋಚನೆ ಮತ್ತು ಸಂರಕ್ಷಣೆಯ ಆಶಯ ವ್ಯಕ್ತವಾಗಿದೆ.

ಶ್ರೀರಾಮನ ಮುಂದೆ ಮದುವೆಯ ಪ್ರಸ್ತಾವ ಮಾಡುವ ಶೂರ್ಪನಖಿಯ ಪಾತ್ರದ ಮೂಲಕವೂ ಕವಿ ಮೊಯಿಲಿಯವರು ಮಾನವೀಯ ಮೌಲ್ಯವನ್ನು ತೆರೆದಿಟ್ಟಿದ್ದಾರೆ. ಶೂರ್ಪನಖಿ ರಾಮನಲ್ಲಿ ಹೇಳುತ್ತಾಳೆ,

ಆರ್ಯ ದ್ರಾವಿಡವೆಲ್ಲ ಒಂದಾಗೆ
ಸಂಘರ್ಷ
ವಳಿಯುತ್ತಾ ಸಾಕೇತ ಲಂಕೆ ತಾವೆ
ಬೆಸೆಯುವುವು
ಸಾಂಸ್ಕೃತಿಕ ಕ್ಲೇಶಗಳು ದ್ವೇಷಗಳು
ಹರಿಯುವುವು
ಸಮರವೆಲ್ಲವು ನೀಗಿ ಸುಖಶಾಂತಿ
ನೆಲೆಸುವುವು
ಲೋಕ ಕಲ್ಯಾಣಕ್ಕೆ ಪರುಷಮಣಿ
ನೀನಾಗು”.

ಈ ರೀತಿ ಎರಡು ಸಮುದಾಯಗಳ ವಿವಾಹವು ಜಗತ್ತಿನ ಕಲ್ಯಾಣಕ್ಕೆ ದಾರಿಯಾಗಬಹುದು ಎಂಬ ನಿಲುವು ವಿಶ್ವಾತ್ಮಕತೆಯಾಗಿ ಮೂಡಿ ಬಂದಿದೆ. ಇಲ್ಲಿ ಕವಿಯ ಸುಧಾರಣಾವಾದಿ ಧೋರಣೆಯೂ ಪ್ರತಿಫಲಿಸಿದೆ.

ಹನುಮಂತ ಇಲ್ಲಿ ಸ್ವಾಭಿಮಾನದ ಕ್ರಾಂತಿ ಪುರುಷನಾಗಿಯೂ ಕಾಣುತ್ತಾನೆ. ಲಂಕಾದಹನವನ್ನು ಮೊಯಿಲಿಯವರು ಒಂದು ಹೊಸತು ಹುಟ್ಟಿನ ನವಯುಗದ ಮೂಲವಾಗಿ ಕಾಣುವುದು ಕುತೂಹಲಕಾರಿಯಾಗಿದೆ.

‘ಸೃಷ್ಟಿ ಸ್ಥಿತಿ ಲಯವೆಲ್ಲ
ಅಗ್ನಿ ಗರ್ಭದೊಳಿಹುದು ಹೊಸತು
ಹುಟ್ಟಿಗೆ ಮೂಲ’

ಎನ್ನುತ್ತಾ ಮುಂದೆ ‘ಕ್ರಾಂತಿ ನದಿ ಹರಿದಂತೆ ಹನುಮ ಹೆಜ್ಜೆಯ ಸುಳಿವು’ ಎನ್ನುತ್ತಾರೆ.

ಪ್ರಜಾಪ್ರಭುತ್ವದ ಮೌಲ್ಯಗಳು ಮೊಯಿಲಿ ರಾಮಾಯಣದಲ್ಲಿ ಅತ್ಯಂತ ಯೋಗ್ಯವಾಗಿ ಮೂಡಿ ಬಂದಿದೆ.

“ರಾಜ್ಯದರಮನೆಯಲ್ಲು, ಮನೆಮನದ
ಚಾವಡಿಯಲ್ಲು
ಸಂದೇಹಕೆಡೆಯಿಲ್ಲದೊಳು ಪ್ರೀತಿ
ವಿಶ್ವಾಸಗಳ
ತುಂಬಬೇಕು. ಪ್ರೇಮದುಲ್ಲಾಸ ಜಗದ ಕಣ
ಕಣದಲ್ಲೂ ಸ್ಫುರಿಸಬೇಕು. ಬಡವ
ಬಲ್ಲಿದರೆಂಬ
ಭೇದಭಾವವು ನೀಗಿ, ವಿವೇಕ
ಉದಿಸಬೇಕು”.

ಇಲ್ಲಿ ‘ಸಂದೇಹಕೆಡೆಯಿಲ್ಲದೊಳು’ ಎಂಬಲ್ಲಿ ಪ್ರಜಾಪ್ರಭುತ್ವದ ಅಗತ್ಯಗಳಲ್ಲಿ ಒಂದಾದ ಪಾರದರ್ಶಕತೆ, ‘ಭೇದಭಾವವು ನೀಗಿ’ ಎಂಬಲ್ಲಿ ಸಮಾನತೆಯನ್ನು ಮತ್ತು ವಿವೇಕ ಉದಿಸಬೇಕು ಎನ್ನುವ ಮೂಲಕ ಸುಶಿಕ್ಷಿತ ಸಮಾಜವನ್ನು ಕಾಣುವುದು ಕವಿಯ ಪ್ರಧಾನ ಆಶಯವಾಗಿ ವ್ಯಕ್ತವಾಗಿದೆ. ‘ಮನೆಮನದ ಚಾವಡಿಯಲ್ಲು’ ಎನ್ನುವುದು ಅಂತರಂಗ ಮತ್ತು ಬಹಿರಂಗದಲ್ಲೂ ಈ ಮೌಲ್ಯಗಳನ್ನು ಕಾಪಾಡಿಕೊಳ್ಳಬೇಕು ಎಂಬ ಇಂಗಿತವಿದೆ.

ಜೈನ ಕವಿ ನಾಗಚಂದ್ರನ ರಾಮಾಯಣ ಮತ್ತು ಅರಣ್ಯ, ನದಿ, ಮಳೆ ಮೊದಲಾದ ಸೃಷ್ಟಿಯ ಸೌಂದರ್ಯವನ್ನು ಕಾವ್ಯಾಭಿಕ್ತಿಯಲ್ಲಿ ನೀಡುತ್ತಾ, ಅಲೌಕಿಕತೆಯೊಳಗಿನ ಸತ್ಯಗಳನ್ನು ಅನಾವರಣಗೊಳಿಸುವ ಕುವೆಂಪು ಅವರ ರಾಮಾಯಣಗಳಲ್ಲಿ ಒಂದು ಮಹಾತ್ವಾಕಾಂಕ್ಷೆ ಇರುವುದನ್ನು ಗುರುತಿಸಲಾಗಿದೆ. ಈ ರಾಮಾಯಣಗಳಲ್ಲಿ ರಾವಣ ಎಂಬ ದುರಂತ ನಾಯಕನನ್ನು ಪರಿಶುದ್ಧಗೊಳಿಸುವ ಆಶಯವಿದೆ. ರಾವಣ ಮತ್ತು ಕುಂಭಕರ್ಣರು ಸೀತಾಮಾತೆಯ ಪುತ್ರರಾಗಿ ಮುಂದಿನ ಜನ್ಮದಲ್ಲಿ ಹುಟ್ಟುತ್ತಾರೆ ಎಂಬ ನಾಗಚಂದ್ರನ ರಾಮಾಯಣ ಈ ಆಶಯವನ್ನು ಗಟ್ಟಿಗೊಳಿಸಲು ಪ್ರಯತ್ನಿಸಿದೆ. ಮೊಯಿಲಿಯವರ ರಾಮಾಯಣದಲ್ಲಿ ಇದೇ ಆಶಯ ತಾತ್ವಿಕವಾಗಿ ರೂಪುಗೊಂಡಿದೆ.

ಇದನ್ನು ಈ ಎರಡು ಸಾಲುಗಳಲ್ಲಿ ನೋಡಬಹುದು. ಬ್ರಹ್ಮಾಸ್ತ್ರಕ್ಕೆ ಬಲಿಯಾದ ಪತಿಯನ್ನು ಕುರಿತು ಮಂಡೋದರಿ,

‘ಮೂರುಲೋಕವ ಗೆದ್ದೆ ಇಂದ್ರಿಯಕೆ ನೀ ಸೋತೆ
ಇಂದ್ರಿಯಂಗಳ ಗೆದ್ದ ರಾಮನೊಳು ನೀ ಸೋತೆ’.

ಎನ್ನುತ್ತಾಳೆ. ಇಲ್ಲಿ ಅಪ್ರತಿಮ ಶೂರನಾದರೂ ಸಾಮಾನ್ಯ ಮಾನವ ಸ್ವಭಾವ ಮತ್ತು ದೌರ್ಬಲ್ಯ ರಾವಣನ ವಿನಾಶಕ್ಕೆ ಕಾರಣವಾಗುವುದನ್ನು ಹೇಳಲಾಗಿದೆ. ಇಂದ್ರಿಯಗಳನ್ನು ಗೆಲ್ಲುವುದು ಮಾನವ ಗುಣಗಳಲ್ಲಿ ಒಂದಾದ ತಾಳ್ಮೆ ಅಥವಾ ಸಂಯಮವನ್ನು ಹೊಂದುವುದನ್ನು ಇದು ಪ್ರತಿಪಾದಿಸುತ್ತದೆ.

ಇನ್ನೊಂದೆಡೆ ವಿಭೀಷಣನನ್ನು ಸಂತೈಸಿ ರಾಮ ಹೇಳುತ್ತಾನೆ,


‘ರಾವಣತ್ವವ ಕಿತ್ತೆ ಆದೊಡೇಂ
ರಾವಣನ
ಉಳಿಸಲಾರದೆ ಹೋದೆ ನಿನ್ನಾಶಯ ತಪ್ಪಿತ್ತು’

ಅಂದರೆ ರಾವಣನ ವಿನಾಶವನ್ನು ರಾಮ ಬಯಸಿರಲಿಲ್ಲ. ರಾವಣನಲ್ಲಿ ರಾಷ್ಟ್ರಪ್ರೇಮಿಯನ್ನು ಮತ್ತು ಪಾತಿವ್ರತ್ಯದ ಜ್ಯೋತಿ ಕೆಡಿಸದ ಪುರುಷನನ್ನು ಕವಿ ಮೊಯಿಲಿಯವರು ಕಾಣುತ್ತಾರೆ. ಇಲ್ಲಿ ರಾವಣತ್ವ ಎಂಬ ಕೆಡುಕನ್ನು ನಾಶಗೊಳಿಸುವುದು ಕಾವ್ಯದ ಆಶಯ. ಆದ್ದರಿಂದಲೇ ರಾವಣತ್ವವನ್ನು ಕಿತ್ತೆ, ಆದರೆ ರಾವಣನನ್ನು ಉಳಿಸಲಾಗಲಿಲ್ಲ ಎಂಬ ತುಮುಲವನ್ನು ರಾಮನ ಮೂಲಕ ಹೇಳಿಸುತ್ತಾರೆ.

ಈ ರೀತಿಯಲ್ಲಿ ವೀರಪ್ಪ ಮೊಯಿಲಿಯವರ ಶ್ರೀ ರಾಮಾಯಣ ಮಹಾನ್ವೇಷಣಂ ಮಹಾಕಾವ್ಯವನ್ನು ಒಳಿತು ಕೆಡುಕುಗಳ ಸಂಘರ್ಷದಲ್ಲಿ ಸತ್ಯವೆಂಬ ಮೌಲ್ಯದ ಹುಡುಕಾಟ ಎನ್ನಬಹುದು. ಈ ರಚನೆ ಜಾತ್ಯಾತೀತತೆ, ಸ್ತ್ರೀ ಸ್ವಾತಂತ್ರ್ಯ, ಮಾದರಿ ಪ್ರಜಾಪ್ರಭುತ್ವ, ಸಮಾನತೆ ಮತ್ತು ಸತ್ಯದ ಸಾಕ್ಷಾತ್ಕಾರ ಮೊದಲಾದ ಮೌಲ್ಯ ಹಾಗೂ ಆದರ್ಶಗಳ ಸಂಗಮ. ಸಮಕಾಲೀನ ಪ್ರಜ್ಞೆ ಮತ್ತು ಜನಪರ ನಿಲುವಿನೊಂದಿಗೆ ರಚಿಸಿದ ಮೊಯಿಲಿ ರಾಮಾಯಣ ವಿಕಾಸಶೀಲ ಧೋರಣೆಯನ್ನು ಹೊಂದಿದೆ. ಅ

***ಡಾ. ವೈ. ಅವನೀಂದ್ರನಾಥ್ ರಾವ್***

**ಮೊಯಿಲಿ ರಾಮಾಯಣದಲ್ಲಿ ಸೀತೆ ಸುಂದರ ಮತ್ತು ಪರಿಶುದ್ಧ ಮಹಿಳೆ. ಹನುಮಂತ ಸ್ನೇಹಿತ ಮತ್ತು ವಿಶ್ವಾಸಾರ್ಹ ಪುರುಷ. ಲಕ್ಷ್ಮಣ ಸ್ವಯಂ ಸ್ಫೂರ್ತಿ ಮತ್ತು ಆತ್ಮ ವಿಶ್ವಾಸದ ಪ್ರತೀಕ. ರಾವಣ ಅಧಿಕಾರದ ಮದವೇರಿದ ದುರಹಂಕಾರಿ ರಾಜ.**



# ಮಹಿಳಾ ಶಿರೋಮಣಿ

ಅಯ್ಯೋ ದೇವ್ರೇ! ಎಂಟು ಗಂಟೆಯಾದ್ರೂ ಈ ರೇಖಾಳ ಪತ್ತೇನೇ ಇಲ್ಲವಲ್ಲ. ಹಾಳಾದವಳು, ಫೋನ್ ಮಾಡಿದ್ರೂ ಎತ್ತೋದಿಲ್ಲ. ಜಂಬಾ ಬಡಿಯೋಕೆ ಆ ಮೊಬೈಲ್ ಬೇರೆ ಕೇಡು. ಹೊಟ್ಟೆಗೆ ಹಿಟ್ಟು ಇಲ್ಲದಿದ್ರೂ ಜುಟ್ಟಕ್ಕೆ ಮಲ್ಲಿಗೆ ಹೂವಂತಾರಲ್ಲಾ ಹಾಗೆ. ಸಾಕಪ್ಪಾ ಸಾಕು.. ವಾರಕ್ಕೊಮ್ಮೆ ಇದೇ ರಾಗ.. ಇನ್ನು ಮನೆ ಕೆಲ್ಸ ಮುಗಿಸಿ ಕರ್ನಾಟಕ ಸಂಘಕ್ಕೆ ಹೋಗೋವಷ್ಟರಲ್ಲಿ 'ಮಹಿಳಾ ದಿನಾಚರಣೆಯ' ಕಾರ್ಯಕ್ರಮಾನೂ ಮುಗಿದೇ ಹೋಗಿರುತ್ತೆ. ಏನು ಮಾಡಲಿ? ಮಹಾನ್ ಸಾಧನೆ ಗೈದಂತಹ ಅದೆಷ್ಟೊ ಮಹಿಳೆಯರಿಗೆ ಇಂದು ಸಮ್ಮಾನ ಮಾಡೋವ್ರಿದ್ದಾರೆ. ನಮಗೆ ಆ ಸಮ್ಮಾನ ಸಿಕ್ಕದಿದ್ರೂ ಪರವಾಗಿಲ್ಲ, ಅವರ ಆ ಸಾಧನೆಯನ್ನ ಶ್ಲಾಘಿಸೋಕಾದ್ರೂ ಹೋಗೋದು ಬೇಡ್ವೇ?

ಹೂಂ. ಹೆಂಗಸರ ಹಣೇಬರಹವೇ ಹೀಗೆ. ಒಂದೋ ಅಮ್ಮ-ಅತ್ತೆಯರ ಹಾಗೆ ಗಂಡ, ಮನೇ ಮಕ್ಕಳನ್ನ ನೋಡಿಕೊಂಡು ಗೌರಮ್ಮನಂತೆ ತೆಪ್ಪಗಿರಬೇಕು, ಇಲ್ಲಾ ಡಿಜೈನರ್ ಸೀರೆ ಉಟ್ಟುಕೊಂಡು, ನೇಲ್ ಪಾಲೀಷ್ ಹಚ್ಚಿಕೊಂಡು, ಹೈ ಹೀಲ್ಡ್ ಚಪ್ಪಲಿ ಮೆಟ್ಟುಕೊಂಡು, ಕೂಲಿಂಗ್ ಗ್ಲಾಸ್ ಹಾಕ್ಕೊಂಡು, ಸ್ಟೈಲಿಷ್ ಇಂಗ್ಲೀಷ್ ಮಾತಾಡ್ತಾ, ನೋ ಪ್ರಾಬ್ಲೆಮ್ ಅಂತ ಕೂಲಾಗಿರಬೇಕು. ನಾವೋ ಇವೆರಡರಲ್ಲೂ ಬರದಂತವ್ರು. ಅಂದ ಮೇಲೆ ಒದ್ದಾಟ ತಪ್ಪಿದ್ದಲ್ಲಾ ನೋಡಿ. ಹೂಂ. ರೇಖಾ ಬರಲಿಲ್ಲಾಂದ್ರೆ ಮನೆಕೆಲ್ಸ ಬಿಡೋಕಾಗುತ್ತಾ? ಹೋಗ್ಲಿ ಪಕ್ಕದ ಮನೆಯ ದೀದಿಗೆ ರೇಣುನಾದ್ರೂ ಬಂದಿದ್ದಾಳೋಂತ ಕೇಳಿದ್ರೆ 'ಇಲ್ಲಾರೀ. ನಿನ್ನೆ ರಾತ್ರಿ ಅವಳ ಅಜ್ಜಿ ತೀರಿಹೋದ್ರಂತೆ. ಇನ್ನು ಎಷ್ಟು ದಿನ ಬರೋದಿಲ್ವೋ ಗೊತ್ತಿಲ್ಲ.' ಅಂತ ಹರಳೆಣ್ಣೆ ಕುಡಿದವ್ರ ಹಾಗೆ ಮುಖ ಮಾಡಿದ್ರು. ಹೇಳೀ ಕೇಳೀ ಸುಳ್ಳುಶಿಖಾಮಣಿಗಳು. ಅಜ್ಜ-ಅಜ್ಜಿಯರನ್ನ, ಅತ್ತೆ-ಮಾವ, ಚಿಕ್ಕಮ್ಮ, ದೊಡ್ಡಮ್ಮರನ್ನ ಅದೆಷ್ಟು ಬಾರಿ ಮೇಲಕ್ಕೆ ಕಳಿಸ್ತಾರೋ ಆ ಪರಮಾತ್ಮನಿಗೇ ಗೊತ್ತು.

ವಟಗುಟ್ಟೋದು ಬಿಟ್ಟು ಚಟಪಟಾಂತ ಎಲ್ಲಾ ಕೆಲ್ಸಾ ಮುಗ್ಸೋವರೆಗೆ ಗಂಟೆ ಹನ್ನೊಂದುವರೆ. ಅತ್ತೆಗೆ ಊಟ ಕೊಡಬೇಕೂಂದ್ರೆ 'ಇನ್ನೂ ಬೆಳಗಿನ ಫಲಹಾರ ಅರಗಿಲ್ಲಾ ಆಮೇಲೆ ಕೊಡಮ್ಮಾ' ಅಂತಾರೆ ಅಂತ ಗೊತ್ತು. ಇನ್ನು ಆಟೋನೋ ಇಲ್ಲಾ ಬಸ್ನೋ ಹಿಡಿ ಹೋದ್ರೂ ಎರಡು ಗಂಟೆ ತಗಲುತ್ತೆ, ಅದ್ರಲ್ಲೂ ಮೆಟ್ರೋ ಕೆಲ್ಸದಿಂದ ಉಂಟಾಗುವ ಭಯಂಕರ ಜಾಮ್‌ನಲ್ಲಿ ಸಿಕ್ಕಬಿಟ್ರೆ ಕಾರ್ಯಕ್ರಮ ನೋಡೋಕೂ ಸಿಗೋದಿಲ್ಲ, ಮತ್ತೆ ಸಹಸ್ರನಾಮ ಶುರುಮಾಡೊದ್ರಲ್ಲೇ ನನ್ನ ಫೋನ್ ಗುಣಗುಟ್ಟಿತು.

"ಹಲೋ, ನಾನು ಸಿಸ್ಟರ್ ಮಾತಾಡ್ತಿದ್ದೀನಿ, ಇಲ್ಲಿ ರೇಖಾ ಅಂತ ಒಬ್ಬ ಮಹಿಳೆ ಬಂದಿದ್ದಾಳೆ, ನಿಮ್ಮ ನಂಬರ್ ಕೊಟ್ಲು, ಅವಳ ದುಡ್ಡು ತೊಗೊಂಡು ಆದಷ್ಟು ಬೇಗ ಸಂಜಯ್ ಗಾಂಧೀ ಹಾಸ್ಪಿಟಲ್ಲಿಗೆ ಬರೋಕೆ ಹೇಳಿದ್ದಾಳೆ." ಅಂದಾಗ ನನ್ನ ಹೃದಯದ ವೇಗ ರಾಜಧಾನಿ ಎಕ್ಸಪ್ರೆಸ್ಸಿನಷ್ಟಾಯ್ತು. "ಹಾಂ! ಅವಳಿಗೇನಾಯ್ತು" ಸ್ವಲ್ಪ ಸರಿಯಾಗಿ ಹೇಳಿ? ಎಂದು ಕೇಳೋಕೂ ಮುನ್ನ ಫೋನ್ ಕಟ್ ಆಯ್ತು. ಮತ್ತೊಮ್ಮೆ ಪ್ರಯತ್ನಿಸಿದಾಗ ಸ್ವಿಚ್ ಆಫ್ ಅಂತ ಬಂತು.

ಅತ್ತೆಗೆ ವಿಷಯ ತಿಳಿಸಿದಾಗ "ನೀನೊಬ್ಬಳೇ ಹೋಗಬೇಡ. ಜೊತೆಗೆ ಯಾರನ್ನಾದ್ರೂ ಕರೆದುಕೊಂಡು ಹೋಗಮ್ಮಾ" ಅಂದ್ರು. ರೇಖಾ ಕೆಲ್ಸಮಾಡೊ ಇನ್ನೊಂದು ಮನೆಗೆ ಫೋನ್ ಮಾಡಿದ್ರೆ, "ನನ್ನ ಮಗ ಸ್ಕೂಲಿನಿಂದ ಬರೋದು ಮೂರಕ್ಕೆ, ಆಮೇಲೆ ಬೇಕಾದ್ರೆ ಹೋಗೋಣ" ಅಂತ ಉತ್ತರ ಬಂದಾಗ ನನಗೆ ನಿಲ್ಲೋಕೆ ಆಗಲಿಲ್ಲ. ರಮೇಶನಿಗೆ ಗೊತ್ತಾಗದಂತೆ ಬ್ಯಾಂಕಿನಲ್ಲಿಟ್ಟ ಅವಳ ಹಣ ಹ್ಯಾಗೆ ತೆಗೀಲಿ ಅಂತ ಯೋಚಿಸುತ್ತ ಇವರಿಗೆ ಫೋನ್ ಮಾಡಿದಾಗ ಕ್ರೆಡಿಟ್ ಕಾರ್ಡ್ ತೊಗೊಂಡು ಹೋಗು ಅಂದ್ರು. ಅತ್ತೆಗೆ ಬರ್ತೇನೆ ಅಂತ ಹೇಳಿದವಳೆ ಆಟೋ ಹೊಡಿದು ಹೊರಟೇ ಬಿಟ್ಟೆ.

ಹತ್ತು ವರ್ಷಗಳ ಹಿಂದೆ ಅಣ್ಣನ ಅನಾಥ ಮಗಳಾದ ರೇಖಾಳ ಮದುವೆಯನ್ನ ಒಕ್ಕಣ್ಣಿನ ರಮೇಶನೊಂದಿಗೆ ಮಾಡಿ ಚಿಕ್ಕಪ್ಪ ತನ್ನ ಜವಾಬ್ದಾರಿಯಿಂದ ಮುಕ್ತನಾಗಿದ್ದ. ತನ್ನದೇ ಆದ ಸಂಸಾರ, ಯಾರ ಹಂಗಿಲ್ಲದ ಸುಖಮಯ ಜೀವನದ ಕನಸು ಕೇವಲ ಕೆಲವೇ ವರ್ಷಗಳವರೆಗೆ ರೇಖಾಳ ಪಾಲಿಗೆ ಬಂದಿತ್ತು. ಕಿರಾಣಿ ಅಂಗಡಿಯಲ್ಲಿನ ಕೆಲಸಾನೂ ಬಿಟ್ಟು ಮನೆಯಲ್ಲೇ ಕುಳಿತು ಬಿಟ್ಟ ಆ ಭೂಪ. ಹೊಟ್ಟೆ ತುಂಬಿಸಲು, ಹುಟ್ಟಿದ ಮಕ್ಕಳನ್ನು ಸಾಕಲು ಮನೆಗೆಲಸ ಬಿಟ್ರೆ ಬೇರೇನು ಸಿಗುತ್ತೆ ಹೇಳಿ? ಕಷ್ಟ ಪಟ್ಟು ದುಡಿದು ತಂದ ಹಣದಿಂದ ಹೆಂಡ ಕುಡಿದು ಗುಂಡು ಕಲ್ಲಿನ ಹಾಗೆ ಮನೇಲೇ ಬಿದ್ದಿರ್ತಾನಂತೆ. ಒಂದು ವಾರ ಸರಿಯಾಗಿದ್ರೆ ಮತ್ತೊಂದು ವಾರ ಮನೆಯಲ್ಲಿ ರಣರಂಗ ಸೃಷ್ಟಿಸಿ ಬಿಡ್ತಾನೆ. ಕೈಗೆ ಸಿಕ್ಕ ಸಾಮಾನಿನಿಂದ ಹಿಂದೆ ಮುಂದೆ ನೋಡದೇ ಹೊಡೀತಾನೆ. ಮಕ್ಕಳ ಭವಿಷ್ಯದ ಚಿಂತೆಯಿಂದ ಆರು ತಿಂಗಳ ಹಿಂದೆ 'ನಶಾ ಮುಕ್ತಿ ಕೇಂದ್ರಕ್ಕೆ' ಕರೆದೊಯ್ದಿದ್ಲು. ಆದ್ರೆ ಅಲ್ಲಿಂದ ಅದೇ ದಿನ ಓಡಿ ಬಂದಿದ್ದ. ಇವಳ ಪ್ರಾರಬ್ಧ ಅಲ್ವೆ? ಪಾಪ.. ಹೋದ ತಿಂಗಳು ಅವನನ್ನ ಪೋಲೀಸ್ ಸ್ಟೇಷನ್ನಿಂದ ಬಿಡಿಸಿಕೊಂಡು ಬಂದಿದ್ಲು. ಇವತ್ತು ಇವಳಿಗೇನಾಯ್ತು?

ಕಷ್ಟ ಪಟ್ಟು ದುಡಿದು ತಂದ ಹಣದಿಂದ ಹೆಂಡ ಕುಡಿದು ಗುಂಡು ಕಲ್ಲಿನ ಹಾಗೆ ಮನೇಲೇ ಬಿದ್ದಿರ್ತಾನಂತೆ. ಒಂದು ವಾರ ಸರಿಯಾಗಿದ್ರೆ ಮತ್ತೊಂದು ವಾರ ಮನೆಯಲ್ಲಿ ರಣರಂಗ ಸೃಷ್ಟಿಸಿ ಬಿಡ್ತಾನೆ. ಕೈಗೆ ಸಿಕ್ಕ ಸಾಮಾನಿನಿಂದ ಹಿಂದೆ ಮುಂದೆ ನೋಡದೇ ಹೊಡೀತಾನೆ.

ಆಟೋದವನಿಗೆ ದುಡ್ಡು ಕೊಟ್ಟು, ಹಾಸ್ಪಿಟಲ್ ಬಳಿಯಿದ್ದ ಎ ಟಿ ಎಮ್ ನಿಂದ ಐದು ಸಾವಿರ ತೆಗೆದು ಭಯಪಡುತ್ತಾ ಒಳಗೆ ಹೋದೆ. ಇವಳನ್ನ ಎಲ್ಲಪ್ಪಾ ಹುಡುಕೋದು ಅನ್ನೋವಷ್ಟರಲ್ಲೇ-"ದೀದೀ, ನಾನು ಬಬ್ಲಿ, ರೇಖಾಳ ಪಕ್ಕದ ಮನೆಯವಳು. ಬನ್ನಿ" ಎನ್ನುತ್ತಾ ಹಿಂಬದಿಯ ವಾರ್ಡಿನೊಳಗೆ ಕರೆದೊಯ್ದಳು. ಮಂಚದ ಮೇಲೆ ರಮೇಶನ್ನ ಮಲಗಿಸಿದ್ರು. ಪಕ್ಕದಲ್ಲಿ ಕೈ ಹಿಡಿದು ಕುಳಿತ ರೇಖಾ ನನ್ನ ನೋಡುತ್ತಲೇ 'ದೀದೀ. ಇವರನ್ನು ಹ್ಯಾಗಾದ್ರೂ ಮಾಡಿ ಉಳಿಸ್ಕೋತೀನಿ' ಅನ್ನುತ್ತಿದ್ದಂತೆಯೇ "ದೀದೀ, ರಮೇಶಂದು ಕಿಡ್ನಿ ಕೆಲ್ಸಾ ಮಾಡ್ತಾ ಇಲ್ಲಂತೆ. ಇನ್ನೇನು ಉಳಿಯೋದಿಲ್ಲಾಂತ ಡಾಕ್ಟರು ಹೇಳಿದ್ದಾರೆ 'ಅಂತ ಬಬ್ಲಿ ಬಡಬಡಿಸಿದ್ದಕ್ಕೆ' ಇಲ್ಲ, ಇಲ್ಲಾ, ದೀದೀ ನೀವೇ ಹೇಳಿದ್ರಲ್ಲಾ.. ನಿಮ್ಮ ಗೆಳತಿಯ ಗಂಡನಿಗೂ ಹೀಗೇ ಆಗಿತ್ತು. ಅವಳು ತನ್ನ ಕಿಡ್ನಿ ಕೊಟ್ಟು ಬದುಕಿಸಿಲ್ದು ಅಂತ. ನಾನೂ ನನ್ನ ಕಿಡ್ನಿ ಕೊಡ್ತೀನಿ. ಇವರನ್ನ ಉಳಿಸ್ಕೋತೀನಿ ದೀದೀ. ನೀವು ಡಾಕ್ಟ್ರಿಗೆ ಹೇಳಿ" ಎನ್ನುತ್ತಾ ಅಳೋಕೆ ಶುರು ಮಾಡಿದ್ಲು.

ದಿನದಿನಕ್ಕೆ ಕುಡಿಯುವ ಹುಚ್ಚು ಹೆಚ್ಚಾದಾಗ, 'ಈ ಬಾರಿ ನಾನು ಕರವಾ ಚೌತ್ ವ್ರತ ಇಡೋದಿಲ್ಲಾ ದೀದೀ.. ಇವನ ಜೊತೆ ಈ ಒದ್ದಾಟದ ಜೀವನ ಸಾಕಾಗಿ ಹೋಗಿದೆ.' ಎನ್ನುವ ರೇಖಾ ಈಗ ತನ್ನ ಕಿಡ್ನಿಯನ್ನೇ ದಾನ ಮಾಡಿ ಅಂತಹ ಪತಿಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡ್ತಿದ್ದಾಳೆ. ಈ ಹೆಣ್ಣಿನ ಕರಗುವ ಹೃದಯಕ್ಕೆ ಏನು ಹೇಳಬೇಕೋ ಅಂತ ತಿಳಿಯದೇ 'ರೇಖಾ ಈ ನಿರ್ಧಾರ ಯಾಕೆ ತೊಗೊಂಡೆ' ಎಂದಾಗ, ಬಿಕ್ಕುತ್ತಾ "ಹುಟ್ಟಾ ಅನಾಥಳಾದ ನನಗೆ ಮನೆ, ಮಕ್ಕಳು, ಸಂಸಾರ ಅಂತ ಕೊಟ್ಟ ನನ್ನ ಈ ಗಂಡನ್ನ ಹ್ಯಾಗೆ ಸಾಯೋಕೆ ಬಿಡಲಿ ದೀದೀ" ಕೊನೇವರೆಗೂ ಪ್ರಯತ್ನ ಮಾಡ್ತೀನಿ? ನನ್ನ ಕಿಡ್ನೀ ಕೊಡ್ತೀನಿ. ಭಾಯೀ ಸಾಬ್‌ಗೆ ಬರೋಕೆ ಹೇಳಿ, ಡಾಕ್ಟರಿಗೂ ನೀವೇ ಹೇಳಿ" ಎಂದು ದೃಢನಿರ್ಧಾರದಿಂದ ನನ್ನ ಕೈ ಹಿಡಿದಾಗ 'ಸರಿಯಮ್ಮ, ಇವರಿಗೆ ಫೋನ್ ಮಾಡಿ ಮುಂದಿನ ವ್ಯವಸ್ಥೆ ಮಾಡೋಕೆ ಹೇಳ್ತೀನಿ' ಎನ್ನುತ್ತಾ ಹೊರಗೆ ಬಂದೆ.

ಮಂಜಾದ ಕಣ್ಣುಗಳಿಂದ ರೇಖಾಳನ್ನ ತಿರುಗಿ ನೋಡಿದಾಗ ಸತ್ಯವಾನನ ಸಾವಿತ್ರಿಯಂತೆ ಕಂಡಳು. ಇಂದು ಈ ಅಮೋಘ, ಅಗೋಚರ ತ್ಯಾಗಮಯಿ, ಮಹಿಳಾ ಶಿರೋಮಣಿಯನ್ನು ನೋಡುವ, ಅವಳ ಹೋರಾಟದಲ್ಲಿ ಭಾಗಿಯಾಗುವ ಭಾಗ್ಯ ನನ್ನದಾಯ್ತಲ್ಲ ಎನ್ನುವ ಸಮಾಧಾನದೊಂದಿಗೆ ಇವರಿಗಾಗಿ ಕಾಯುತ್ತಾ ನಿಂತೆ. ಅ

***ಸವಿತಾ ಇನಾಮದಾರ್***

# ದೆಹಲಿ ಕನ್ನಡ ಶಾಲೆಯಲ್ಲಿ ವಾರ್ಷಿಕೋತ್ಸವ




ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಆದ್ಯತೆಯ ಮೇರೆಗೆ ನಿರ್ಮಾಣವಾದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸಾಧನೆ ನಿಜಕ್ಕೂ ಹೆಮ್ಮೆಪಡುವಂತಹದ್ದು ಎಂದು ಕೇಂದ್ರ ಭೂಸಾರಿಗೆ, ರಸ್ತೆ ಹಾಗೂ ರಾಷ್ಟ್ರೀಯ ಹೆದ್ದಾರಿಯ ಸಚಿವರಾದ ಶ್ರೀ ಆಸ್ಕರ್ ಫೆರ್ನಾಂಡಿಸ್ ಅವರು ಹೇಳಿದರು. ಅವರು 2013ರ ಡಿಸೆಂಬರ್ 22ರಂದು ನಡೆದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತಾಡುತ್ತಿದ್ದರು.



ಭಾರತದಲ್ಲಿ ಸಿಗುವ ವಿದ್ಯಾಭ್ಯಾಸವು ಜಗತ್ತಿನ ಬೇರೆಲ್ಲಿಯೂ ದೊರಕದು ಎಂಬ ಅಮೇರಿಕದ ಅಧ್ಯಕ್ಷರಾದ ಒಬಾಮ ಅವರ ಮಾತೇ ನಮ್ಮ ಶಿಕ್ಷಣದ ಮಹತ್ವವನ್ನು ಎತ್ತಿ ಹಿಡಿಯುತ್ತದೆ ಎಂದ ಶ್ರೀ ಫೆರ್ನಾಂಡಿಸ್ ಅವರು ಪ್ರಸ್ತುತ ಈ ಸಂಸ್ಥೆಗೆ ಹೆಚ್ಚುವರಿ ಕಟ್ಟಡದ ಅಗತ್ಯವಿದ್ದು, ಅದರ ನಿರ್ಮಾಣ ಹಂತಕ್ಕೆ ಸಂಸದರ ಅನುದಾನದಿಂದ ನೆರವು ನೀಡುವ ಭರವಸೆ ಕೂಡಾ ನೀಡಿದರು.

ಸಮಾರಂಭದ ಇನ್ನೋರ್ವ ಅತಿಥಿಯಾಗಿದ್ದ ಸಫ್ದರ್‌ಜಂಗ್ ಆಸ್ಪತ್ರೆ ಹಾಗೂ ವರ್ಧಮಾನ್ ಮೆಡಿಕಲ್ ಕಾಲೇಜು ನವದೆಹಲಿಯ ಸ್ಪೆಷಲ್ ಡೈರೆಕ್ಟರ್ ಜನರಲ್ ಮತ್ತು ಮೆಡಿಕಲ್ ಅಧೀಕ್ಷಕರಾದ ಡಾ॥ ಬಿ.ಡಿ. ಅಥಣಿ ಅವರು ಮಕ್ಕಳಿಗೆ ಆರೋಗ್ಯದ ಬಗ್ಗೆ ಸೂಕ್ತ ಸಲಹೆ ಜೊತೆಗೆ ಚಿಕಿತ್ಸೆಯ ನೆರವು ಹಾಗೂ ಸಂಸ್ಥೆಯ ಮಕ್ಕಳಿಗೆ ಅಗತ್ಯವಾದಲ್ಲಿ ವೈದ್ಯಕೀಯ ಸಂಬಂಧಿತವಾದ ಕಾರ್ಯಕ್ರಮ ನೀಡುವ ಭರವಸೆ ನೀಡಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣ ಭಟ್ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಸಂಸ್ಥೆಯ ಕಾರ್ಯ ಚಟುವಟಿಕೆಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಪ್ರಾಂಶುಪಾಲರಾದ ಶ್ರೀ ಕೆ. ಟಿ. ಗಣೇಶ್ ಅವರು ಸಂಸ್ಥೆಯ ವಾರ್ಷಿಕ ವರದಿಯನ್ನು ವಾಚಿಸಿದರು.

ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಮನೋರಂಜನಾ ಕಾರ್ಯಕ್ರಮಗಳು ನಡೆಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪೋಷಕರು, ಹಳೆಯ ವಿದ್ಯಾರ್ಥಿಗಳು, ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರು, ಪದಾಧಿಕಾರಿಗಳು ಹಾಗೂ ಸದಸ್ಯರು ಅಲ್ಲದೆ ಸಂಸ್ಥೆಯ ಅಭಿಮಾನಿಗಳು ಉಪಸ್ಥಿತರಿದ್ದರು. ಹಿರಿಯ ಶಿಕ್ಷಕರಾದ ಶ್ರೀಮತಿ ಸೀಮಾ, ಕುಮಾರಿ ವಂದನಾ ಮತ್ತು ಕುಮಾರಿ ಬಿದಿಶಾ ಕಾರ್ಯಕ್ರಮವನ್ನು ನಿರೂಪಿಸಿದರು. ಅ

# ದೆಹಲಿ ಕನ್ನಡ ಶಾಲೆಯಲ್ಲಿ ಗಣರಾಜ್ಯೋತ್ಸವ ದಿನಾಚರಣೆ

ದೆಹಲಿ ಕನ್ನಡ ಶಾಲೆಯಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಕಳೆದ ಸಾಲಿನಲ್ಲಿ ನಿವೃತ್ತಿ ಹೊಂದಿದ ಸಂಸ್ಥೆಯ ಹಿರಿಯ ಶಿಕ್ಷಕಿ ಶ್ರೀಮತಿ ಉಮಾರಾಣಿ ಅವರು ಧ್ವಜಾರೋಹಣ ನೆರವೇರಿಸಿದರು. ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್, ಕಾರ್ಯಕಾರಿ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ತಾರಾ ಅವರು ಉಪಸ್ಥಿತರಿದ್ದರು.



ಗಣರಾಜ್ಯೋತ್ಸವ ದಿನಾಚರಣೆಯ ಮಹತ್ವದ ಕುರಿತು ಕನ್ನಡ, ಹಿಂದಿ ಹಾಗೂ ಆಂಗ್ಲಭಾಷೆಯಲ್ಲಿ ವಿದ್ಯಾರ್ಥಿಗಳು ತಮ್ಮ ವಿಚಾರವನ್ನು ಮಂಡಿಸಿ ನೆರೆದ ಎಲ್ಲಾ ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯ ಕುರಿತು ಜಾಗೃತಿ ಮೂಡಿಸಿದರು. ಎನ್.ಸಿ.ಸಿ.ಯ ಕೆಡೆಟ್‌ಗಳಿಂದ ಪಥಸಂಚಲನ, ಮಕ್ಕಳಿಂದ ರಾಷ್ಟ್ರಪ್ರೇಮವನ್ನು ಉಕ್ಕೇರಿಸುವಂತಹ ವರ್ಣರಂಜಿತ ಸಮೂಹ ನೃತ್ಯ ಹಾಗೂ ಸಮೂಹಗಾನಗಳು ನಡೆದವು. ಅ

## ಸೋಮನಾಥ್ ಮರಡೂರ್ ಅವರಿಂದ ಶಾಸ್ತ್ರೀಯ ಗಾಯನ

ಪಂಡಿತ್ ಸೋಮನಾಥ್ ಮರಡೂರ್ ಅವರು ದೆಹಲಿಯಲ್ಲಿ ಫೆಬ್ರವರಿ 23ರಂದು ನಡೆದ ಸ್ವಾಮಿ ಹರಿದಾಸ–ಬೈಜು ಬಾವ್‌ರ ಸಂಗೀತ ಸಮಾರೋಹದಲ್ಲಿ ಶಾಸ್ತ್ರೀಯ ಗಾಯನ ಕಾರ್ಯಕ್ರಮ ನೀಡಿದರು. ಪಂಡಿತ್ ರಾಜೇಂದರ್ ಪ್ರಸನ್ನ ಅವರ ಕೊಳಲು ವಾದನವು ಅದೇ ಸಂದರ್ಭದಲ್ಲಿ ನಡೆಯಿತು. ಉಸ್ತಾದ್ ಕಮಾಲ್ ಸಬ್ರಿ ಅವರ ಸಾರಂಗಿ ಹಾಗೂ ಉಸ್ತಾದ್ ಲಚ್‌ಮನ್ ದಾಸ್ ಸಂಧು ಅಮರ ತುಮ್ರಿ ದಾದ್ರ ಕಾರ್ಯಕ್ರಮವು ಸಮಾರೋಹದ ಎರಡನೇ ದಿನ ನಡೆಯಿತು. ಅ






## ಅವನೀಂದ್ರನಾಥ್ ರಾವ್ ಅವರಿಗೆ ಡಾಕ್ಟರೇಟ್ ಪ್ರದಾನ

ಮಧ್ಯಪ್ರದೇಶದ ಮಹಾತ್ಮ ಗಾಂಧಿ ಚಿತ್ರಕೂಟ ಗ್ರಾಮೋದಯ ವಿಶ್ವವಿದ್ಯಾಲಯದಲ್ಲಿ ಈಚೆಗೆ ನಡೆದ ಘಟಿಕೋತ್ಸವದಲ್ಲಿ ದೆಹಲಿಯ ವೈ. ಅವನೀಂದ್ರನಾಥ್ ರಾವ್ ಅವರು ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಎನ್.ಸಿ. ಗೌತಮ್ ಅವರಿಂದ ಡಾಕ್ಟರೇಟ್ ಪದವಿ ಸ್ವೀಕರಿಸಿದರು. ಅ

## ಏಪ್ರಿಲ್ 5, 6 ರಂದು ದೆಹಲಿಯಲ್ಲಿ ರಾಷ್ಟ್ರೀಯ ಕನ್ನಡ ಸಮ್ಮೇಳನ

'ದೆಹಲಿ ಕನ್ನಡಿಗ' ಪತ್ರಿಕೆಯು 31ನೇ ರಾಷ್ಟ್ರೀಯ ಕನ್ನಡ ಸಮ್ಮೇಳನವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 2014ರ ಏಪ್ರಿಲ್ 5 ಮತ್ತು 6 ರಂದು ನಡೆಸಲಿದೆ.

ಈ ಸಮ್ಮೇಳನವನ್ನು ಕರ್ನಾಟಕ ರಾಜ್ಯ ಮಹಿಳಾ ವಿ.ವಿ.ಯ ಕುಲಪತಿ ಡಾ. ಮೀನಾ ಚಂದಾವರ್‌ಕರ್ ಅವರು ಉದ್ಘಾಟಿಸಲಿರುವರು. ಸುಪ್ರಸಿದ್ಧ ಕೃಷಿ ವಿಜ್ಞಾನಿ, ಕೃಷಿ ಸಚಿವಾಲಯದ ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಮಹಾನಿರ್ದೇಶಕ, ಕೃಷಿ ಸಂಶೋಧನಾ, ಶಿಕ್ಷಣ ವಿಭಾಗದ ಕಾರ್ಯದರ್ಶಿ ಡಾ. ಎಸ್. ಅಯ್ಯಪ್ಪನ್ ಅವರು ಅಧ್ಯಕ್ಷತೆ ವಹಿಸಲಿರುವರು. ಇಂಡಿಯನ್ ಓವರ್‌ಸೀಸ್ ಬ್ಯಾಂಕಿನ ಅಧ್ಯಕ್ಷ ಎಂ. ನರೇಂದ್ರ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿರುವರು. ಶೈಕ್ಷಣಿಕ ಯೋಜನೆ ಮತ್ತು ಆಡಳಿತದ ರಾಷ್ಟ್ರೀಯ ವಿ.ವಿ.ಯ ಕುಲಪತಿ ಪ್ರೊ. ಆರ್. ಗೋವಿಂದ ಅವರು ಪುಸ್ತಕ ಮತ್ತು ಕಲಾ ಪ್ರದರ್ಶನ ಉದ್ಘಾಟಿಸಲಿರುವರು.


ಸಮ್ಮೇಳನದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ದೇಶಾದ್ಯಂತದಿಂದ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿರುವರು. ಈ ಸಮ್ಮೇಳನದಲ್ಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಸಮ್ಮೇಳನ ಸಂಚಾಲಕ ಬಾ. ಸಾಮಗ ಅವರು ವಿನಂತಿಸಿಕೊಂಡಿದ್ದಾರೆ. ಅ

## ಶ್ರೀ ರಾಮಾಯಣ ಮಹಾನ್ವೇಷಣಂ ಕೃತಿ ಸಮರ್ಪಣೆ

ಭಾರತದ ರಾಷ್ಟ್ರಪತಿ ಶ್ರೀ ಪ್ರಣವ್ ಮುಖರ್ಜಿ ಅವರಿಗೆ ಕೇಂದ್ರ ಪಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಹಾಗೂ ಪರಿಸರ ಮತ್ತು ಅರಣ್ಯ ಸಚಿವರಾದ ಡಾ. ಎಂ. ವೀರಪ್ಪ ಮೊಯಿಲಿ ಅವರು ಬರೆದ ಎರಡು ಸಂಪುಟಗಳ ಶ್ರೀ ರಾಮಾಯಣ ಮಹಾನ್ವೇಷಣಂ ಕೃತಿಯನ್ನು ದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ಸಮಾರಂಭವೊಂದರಲ್ಲಿ ಫೆಬ್ರವರಿ 3ರಂದು ನೀಡಲಾಯಿತು. ಈ ಕೃತಿಯನ್ನು ಪ್ರಧಾನ್ ಗುರುದತ್ತ ಅವರು ಕನ್ನಡದಿಂದ ಹಿಂದಿಗೆ ಭಾಷಾಂತರಿಸಿದ್ದಾರೆ.. ಅ



## ಡಾ. ಮನು ಎನ್. ಕುಲಕರ್ಣಿ ಅವರ ಪುಸ್ತಕ ಬಿಡುಗಡೆ




ದೇಶದ ಹೆಸರಾಂತ ಚಿಂತಕ, ಬರಹಗಾರ ಮತ್ತು ಯುನಿಸೆಫ್‌ನಲ್ಲಿ ಉನ್ನತ ಹುದ್ದೆಯಲ್ಲಿದ್ದು ಕಳೆದ ಜುಲೈ 12ರಂದು ನಿಧನ ಹೊಂದಿದ ಕನ್ನಡಿಗ ಡಾ. ಮನು ಎನ್. ಕುಲಕರ್ಣಿ ಅವರ ಡೆವಲಪ್‌ಮೆಂಟ್ ಡಾಯಲೊಗ್–ಥೋಟ್ಸ್ ಆನ್ ಸೋಸಿಯೋ ಎಕನಾಮಿಕ್ ಇಶ್ಯೂಸ್ ಎಂಬ ಪುಸ್ತಕವು ಫೆಬ್ರವರಿ 22ರಂದು ದೆಹಲಿಯಲ್ಲಿ ಬಿಡುಗಡೆಯಾಯಿತು.

ದೆಹಲಿಯ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸಯನ್ಸ್ ಸಂಸ್ಥೆಯು ಗ್ಯಾನ್ ಪಬ್ಲಿಶಿಂಗ್ ಹೌಸ್‌ನ ಸಹಯೋಗದೊಂದಿಗೆ ಡಾ. ಕುಲಕರ್ಣಿ ಅವರ ಪುಸ್ತಕವನ್ನು ಪ್ರಕಟಿಸಿತ್ತು. ಹುಡ್ಕೋದ ಅಧ್ಯಕ್ಷ ಶ್ರೀ ವಿ. ಪಿ. ಬಳಿಗಾರ್, ಡಾ. ಕುಲಕರ್ಣಿ ಅವರ ಪತ್ನಿ ವಿಜಯಲಕ್ಷ್ಮಿ, ಮಗಳು ಶ್ವೇತಾ ಹಾಗೂ ಪುತ್ರ ಮತ್ತು ಶ್ರೀ ಶರತ್ ಜವಳಿ ಸಮಾರಂಭದಲ್ಲಿ ಭಾಗವಹಿಸಿದ್ದರು. ಸಾಮಾಜಿಕ ಅಭಿವೃದ್ಧಿ ಕಾರ್ಯದಲ್ಲಿ ಉನ್ನತ ಜ್ಞಾನ ಹಾಗೂ ಅನುಭವ ಪಡೆದಿದ್ದ ಡಾ. ಕುಲಕರ್ಣಿಯವರು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದರು. ಅವರು ಓರ್ವ ಗಾಂಧೀವಾದಿಯಾಗಿದ್ದು ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸದಾ ಚಿಂತಿಸುತ್ತಿದ್ದರು. ಅ

*ಚೆನ್ನು ಎಸ್. ಮಠದ*

## ಬಾ. ಸಾಮಗರಿಗೆ 'ತುಳುರತ್ನ' ಪ್ರಶಸ್ತಿ

ತುಳುನಾಡು, ನುಡಿ, ಸಾಹಿತ್ಯ, ಸಂಸ್ಕೃತಿ ಪ್ರಗತಿಗೆ ಅಪ್ರತಿಮ ಸೇವೆ ಸಲ್ಲಿಸಿದ್ದನ್ನು ಪರಿಗಣಿಸಿ ದಿಲ್ಲಿಯ 'ತುಳವೆರ್', 'ದೆಹಲಿ ಕನ್ನಡಿಗ' ಪತ್ರಿಕೆಗಳ ಸಂಪಾದಕರಾದ ಬಾ. ಸಾಮಗ ಅವರಿಗೆ 'ತುಳುರತ್ನ" ಪ್ರಶಸ್ತಿಯನ್ನು ಮೀರಜ್‌ನಲ್ಲಿ ಡಿಸೆಂಬರ್ 28ರಂದು ಕರ್ನಾಟಕ ತುಳುನಾಡ್ ಸಂಘ ಏರ್ಪಡಿಸಿದ್ದ ಬೆಳ್ಳಿ ಹಬ್ಬ ಸಮಾರಂಭದಲ್ಲಿ ಅಖಿಲ ಭಾರತ ತುಳು ಒಕ್ಕೂಟದ ಅಧ್ಯಕ್ಷ ಧರ್ಮಪಾಲ ದೇವಾಡಿಗ ಅವರು ನೀಡಿ ಸನ್ಮಾನಿಸಿದರು. ಅ





## ತುಳು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ವಸಂತ ಶೆಟ್ಟಿ ಬೆಳ್ಳಾರೆ

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರನ್ನು ಕರ್ನಾಟಕ ಸರಕಾರವು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯನನ್ನಾಗಿ ಮುಂದಿನ ಮೂರು ವರ್ಷದ ಅವಧಿಗೆ ನೇಮಿಸಿದೆ. ಶ್ರೀಮತಿ ಜಾನಕಿ ಬ್ರಹ್ಮಾವರ ಅವರು ಅಧ್ಯಕ್ಷೆಯಾಗಿ ನೇಮಕಗೊಂಡಿದ್ದಾರೆ. ಅ

## ರೇಣುಕಾ ನಿಡಗುಂದಿ ಪುಸ್ತಕ ಬಿಡುಗಡೆ

ದೆಹಲಿಯ ಬರಹಗಾರ್ತಿ ರೇಣುಕಾ ನಿಡಗುಂದಿ ಅವರ 'ಡಿಲ್ಲಿ ಡೈರಿಯ ಪುಟಗಳು' ಅಹಿರ್ನಿಶಿ ಪ್ರಕಾಶನದ ಮೂಲಕ ಪ್ರಕಟಗೊಂಡು ಇದೇ ಮಾರ್ಚ್ 30ರ ಭಾನುವಾರ ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಚಾಮರಾಜನಗರದಲ್ಲಿರುವ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಬಿಡುಗಡೆಯಾಗಲಿದೆ. ಈ ಸಂದರ್ಭದಲ್ಲಿ ವಿದ್ವಾಂಸರಾದ ಡಾ. ಸಿ.ಎನ್. ರಾಮಚಂದ್ರನ್, ಡಾ. ಪುರುಷೋತ್ತಮ ಬಿಳಿಮಲೆ ಮತ್ತು ದಿನೇಶ್ ಅಮೀನ್ ಮಟ್ಟು ಅವರು ಉಪಸ್ಥಿತರಿರುವರು. ಅ


### Statement of Ownership and other Particulars about Delhi Karnataka Sangha's ABHIMATA
### FORM-IV (See Rule 8)

| | | |
|---|---|---|
| **Place of Publication** | : | Delhi Karnataka Sangha, New Delhi |
| **Periodicity of Pub** | : | Monthly |
| **Printers Name** | : | M/s Saujanya Printing Press, C-95, Okhla Industrial Area, Phase-I, New Delhi-110020 |
| **Publishers Name** | : | C.M. Nagaraja |
| **Nationality** | : | Indian |
| **Add ress** | : | Delhi Karnataka Sangha Rao Tularam Marg, Sector-12, R.K. Puram, New Delhi - 22 |
| **Editor's Name** | : | Balakrishna Naik D |
| **Nationality** | : | Indian |
| **Address** | : | As Above |
| **Name & Address** | : | Delhi Karnataka Sangha of Individual who Rao Tularam Marg, Sector-12 own the News Paper R.K. Puram, New Delhi- 110022 |

I, C.M. Nagaraja, hereby declare that the particulars given above are true to the best of my knowledge and belief.

**08.03.2014** **Sd\-**
**New Delhi** **Publisher**





# ರಂಗಾದ ರಂಗಮಂಚ

ಕಾಲದಾಚೆಗಿನ ಯೋಚನೆಗಳನ್ನು ಹೊತ್ತುಕೊಂಡು ವಾಸ್ತವಕ್ಕೂ ತಾನು ಹೋಗುತ್ತಿರುವ ದಾರಿಗೂ ನಡುವೆ ಇದ್ದ ಹಿರಿದಾದ ಕಂದಕವನ್ನು ದಾಟಲಾಗದೇ ಮುಗ್ಗರಿಸಿ ಬಿದ್ದು ಇತಿಹಾಸದ ಪುಟಗಳಲ್ಲಿ ನಗೆಗೀಡಾದ ಹದಿನಾಲ್ಕನೇ ಶತಮಾನದ ಬಾದಶಹ ಮೊಹಮ್ಮದ್ ಬಿನ್ ತುಘಲಕ್‌ನ ಕಥೆಯನ್ನು ಆಧರಿಸಿ ಗಿರೀಶ ಕಾರ್ನಾಡರು 1964ರಲ್ಲಿ ತುಘಲಕ್ ನಾಟಕವನ್ನು ಬರೆದರೂ ಇಂದು ಅದನ್ನು ನೋಡುವ ಪ್ರೇಕ್ಷಕನಿಗೆ ಮತ್ತು ಓದುವ ಓದುಗನಿಗೆ ಆ ಕಥೆ ಈ ಕಾಲದಲ್ಲಿಯೇ ನಮ್ಮೆದುರೇ ನಡೆಯುತ್ತಿರುವ ಘಟನೆಗಳಂತೇ ಕಾಣುತ್ತದೆ. ಧರ್ಮವನ್ನು ರಾಜಕಾರಣದಿಂದ ದೂರವಿಡುವುದು, ಆಳುವವರು ಮಾಡುವ ನಿರ್ಧಾರಗಳ ಮೇಲೆ ವ್ಯಾಪಾರಿಗಳ ಪ್ರಭಾವವನ್ನು ದೂರಮಾಡುವುದು, ಉನ್ನತ ಆದರ್ಶಗಳ ಜತೆಗೆ ಜನಸಾಮಾನ್ಯರಿಗೆ ಗೌರವ ಮತ್ತು ಆಡಳಿತದಲ್ಲಿ ಶಿಸ್ತನ್ನು ನೀಡುವುದಕ್ಕಾಗಿ ತುಘಲಕ್ ತೆಗೆದುಕೊಂಡ ನಿರ್ಧಾರಗಳ ಪರಿಣಾಮವನ್ನು ಕಾರ್ನಾಡರು ಬರೆದು ಅರ್ಧ ಶತಮಾನ ಕಳೆದರೂ ಪರಿಸ್ಥಿತಿ ಇಂದಿಗೂ ಹಾಗೇ ಇದೆ. ಜನಸಾಮಾನ್ಯರಾದ ನಾವು ಇಂದಿನ ತುಘಲಕರನ್ನು ನೋಡಿ ಮರುಗುತ್ತೇವೆ.

ಕಾರ್ನಾಡರ ತುಘಲಕನನ್ನು ಕನ್ನಡದ ರಂಗಭೂಮಿಯಲ್ಲಿ ಪರಿಣಾಮಕಾರಿಯಾಗಿ ಅಭಿನಯಿಸಿ ರಂಗವನ್ನು ಆಳಿದ ಸಿ.ಆರ್. ಸಿಂಹ ಬದುಕಿನ ರಂಗಭೂಮಿಯಿಂದ ಮರೆಯಾಗಿದ್ದಾರೆ. ಸಿ.ಅಶ್ವತ್ಥ್, ಲೋಕೇಶ್, ಕಪ್ಪಣ್ಣನವರೊಂದಿಗೆ ನಟರಂಗದಲ್ಲಿ ತುಘಲಕ್ ಅಲ್ಲದೇ ಸಂಕ್ರಾಂತಿ, ಕಾಕನಕೋಟೆ, ಸೂರ್ಯ ಶಿಕಾರಿಯ ಮೂಲಕ ಪಾತ್ರಗಳನ್ನು ಅದ್ಭುತವಾಗಿ ನಟಿಸಿ, ನಾಟಕ ಸಿನಿಮಾಗಳನ್ನು ನಿರ್ದೇಶಿಸಿ ರಂಗಾಸಕ್ತರ ಮನಸಿನೊಳಗೆ ಎಂದಿಗೂ ನಿಲ್ಲುವ ಸಿಂಹರ ಗುಹೆಯೊಳಗೆ ಪ್ರವೇಶಿಸುವ ಇನ್ನೊಂದು ಸಿಂಹದಮರಿಗೆ ಕಾಯಬೇಕಾಗಿದೆ.

ದೆಹಲಿಯ ರಂಗಭೂಮಿಯಲ್ಲಿ ತುಘಲಕ್ ಕನ್ನಡ ಮತ್ತು ಹಿಂದಿಯಲ್ಲಿ ಪ್ರದರ್ಶನಗೊಳ್ಳುತ್ತಾ ಇರುತ್ತದೆ. ದೆಹಲಿ ಕರ್ನಾಟಕ ಸಂಘದಲ್ಲಿಯೂ ಮುಂದಿನ ತಿಂಗಳುಗಳಲ್ಲಿ ರಂಗಚಟುವಟಿಕೆಗಳನ್ನು ಉತ್ಸಾಹದಿಂದ ನಡೆಸುವ ಹುಮ್ಮಸ್ಸಿನಲ್ಲಿ ಇಲ್ಲಿನ ರಂಗಾಸಕ್ತರು ಈಗಾಗಲೇ ತಾಲೀಮುಗಳನ್ನು ನಡೆಸುತ್ತಿದ್ದಾರೆ. ಇನ್ನೂ ಯಾವುದೇ ನಾಟಕದಲ್ಲಿ ತೊಡಗಿಸದವರಿಗೆ ಎಲ್ಲಿಯಾದರೂ ಸೇರುವ ಸಾಧ್ಯತೆ ಇರಬಹುದು. ಅಥವಾ ನಾಟಕದ ಪ್ರೇಕ್ಷಕನಾಗುವುದೇ ದೊಡ್ಡ ಭಾಗ್ಯ ಎನ್ನಬಹುದು.

ನಾಟಕ ಆರಂಭವಾಗಲು ರಂಗಮಂಚದಿಂದ ಪರದೆಯನ್ನು ಈಗಷ್ಟೇ ಸರಿಸಿಯಾಗಿದೆ. ದೆಹಲಿಯಲ್ಲಿ ಕುಳಿತು ಮತ್ತೊಬ್ಬ ಹೊಸ ತುಘಲಕನ ದರಬಾರನ್ನು ನೋಡೋಣ.

*ಬಾಲಕೃಷ್ಣ ನಾಯ್ಕ್ ಡಿ.*

# Looking for a Job

## WALK-IN INTERVIEWS

People who can speak Kannada and English Language (English is a MUST) or any regional language !
Male or Female anyone can apply !
Age no bar !!!
Any Fresher /12th pass / Under Graduate / Graduates / Retired can apply

ಕನ್ನಡ ಮತ್ತು ಇಂಗ್ಲೀಷ್ ಭಾಷೆ (ಇಂಗ್ಲೀಷ್ ಕಡ್ಡಾಯ ಆಗಿದೆ) ಅಥವಾ ಯಾವುದೇ ಪ್ರಾದೇಶಿಕ ಭಾಷೆ ಮಾತನಾಡುತ್ತಾರೆ ಜನರು!
ಪುರುಷ ಅಥವಾ ಸ್ತ್ರೀ ಯಾರಾದರೂ ಅನ್ವಯಿಸಬಹುದು.

**Contact**

**Mr. Sanjay**

**23A, Shivaji Marg,1st floor, Times of India Building, Delhi-110015**
**near Motinagar metro station Landmark near Haldiram**
**Contact No. – 9718191114/ 011-45568400**



ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
PRINTING PRESS
A HOUSE OF QUALITY PRINTING

C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
March - 2014, Price Rs.1/-  RNI Regn. No. 53405/91, DL-SW-1/4016/13-15
Printout Date : March 8th / 9th, Postal Date :10th / 11th, Total Pages-20







Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770 w